

# ಭೃಗುವಾಣಿ
# BHRUGU VANI

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ | Kannada Tulu English Quarterly

Volume 1 : Issue 1 KARMUL00447 BENGALURU JANUARY 2021 Price Rs.10/-

## ವಿದ್ಯಾಪೀಠದಲ್ಲಿ ಪೇಜಾವರ ಶ್ರೀಗಳ ಶಿಲಾ ವೃಂದಾವನ




## ಭಕ್ತಿ ಶ್ರದ್ಧೆಯ ದುರ್ಗಾ ನಮಸ್ಕಾರ



## ಕ್ಯಾಲೆಂಡ್ 2021 ಬಿಡುಗಡೆ





ಪ್ರತಿಭಾ ಪುರಸ್ಕಾರ



ಕೃಷ್ಣ ಸಂಧಾನ – ತಾಳಮದ್ದಳೆ

**ಭೃಗುವಾಣಿಯ**
**ಸಮಸ್ತ ಓದುಗರಿಗೆ**
**ಹೊಸ ಇಸವಿ 2021ರ**
**ಶುಭಾಶಯಗಳು**



*With best compliments from :*

# TEDMAG
# ENGINEERING & MANAGEMENT CONSULTANTS (P) LTD.

SWAGAT, 1209, 11th CROSS,
HSR LAYOUT SECTOR I,
BANGALORE – 560 102.

TEL.: +91 (0)80 22586129
FAX: +91 (0)80 22589134

E-mail:
Bangalore : tedmagemc@hotmail.com
sridhar_bhat@yahoo.com
Chennai : myram47@gmail.com
Mumbai : mindi1940@yahoo.com

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 01 ಸಂಚಿಕೆ 01

ಅಧ್ಯಕ್ಷರು :
**ವಿಜಯಲಕ್ಷ್ಮಿ ಭಟ್ ಎಸ್.**

ಕಾರ್ಯದರ್ಶಿ :
**ಎಂ. ಕೆ. ಗುರುಮೂರ್ತಿ**

ಸಂಪಾದಕರು :
**ಎಂ. ಸತ್ಯನಾರಾಯಣ ಭಟ್**

ಸಂಪಾದಕ ಮಂಡಳಿ :
**ಹರಿದಾಸ ಮುನ್ನೂರು**
**ಡಿ. ಶರತ್ ಕುಮಾರ ಭಟ್**
**ಡಾ. ಕೆ.ಎನ್. ಅಡಿಗ**
**ರಂಜಿತ್ ಯಡಪಾಡಿತ್ತಾಯ**
**ವೈ. ಜಯಂತರಾವ್**
**ಟಿ.ಎಸ್. ನಾಗರಾಜ ಉಪಾಧ್ಯಾಯ**
**ಎಂ. ಕೃಷ್ಣ ಪ್ರಸಾದ್**

ಸಲಹೆಗಾರರು :
**ಶ್ರೀ ಎಸ್. ಹರಿದಾಸ ಉಪಾಧ್ಯ**

ಜಾಹೀರಾತು ಸಮನ್ವಯ :
**ಶ್ರೀ ವೈ. ರಾಧಾಕೃಷ್ಣ**
**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**

ಛಾಯಾಚಿತ್ರಗಳು
**ಕೆ. ಬಾಲಕೃಷ್ಣ ಉಪಾಧ್ಯಾಯ**
**ಮಟ್ಟಿ ರಾಮಚಂದ್ರರಾವ್**

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org



# ಅಧ್ಯಕ್ಷರ ಮಾತು......

ನಲ್ಮೆಯ ಸದಸ್ಯ ಬಂಧುಗಳೇ,

ಕಾಲದ ಓಟ ಮತ್ತೊಂದು ವರ್ಷವನ್ನು ಹಿಂದಕ್ಕೆ ಹಾಕಿದೆ. ಹಲವು ಸ್ಥಿತ್ಯಂತರ ಮತ್ತು ತಲ್ಲಣಗಳಿಗೆ ಕಾರಣವಾದ 2020 ಬಹುತೇಕರಿಗೆ ನೋವು ನೀಡಿದ್ದೇ ಹೆಚ್ಚು. ಚೀನಾದ ವುಹಾನ್ ನಗರದಲ್ಲಿ ಉಗಮವಾದ ಕರೋನಾದ ಪ್ರಥಮ ಪ್ರಕರಣ ಭಾರತದಲ್ಲಿ 2020ರ ಜನವರಿ 30 ರಂದು ದಾಖಲಾದ ನಂತರ ಈ ಮಹಾಮಾರಿ ತನ್ನ ಕರಿ ನೆರಳನ್ನು ವ್ಯಾಪಿಸಿ, ಎಲ್ಲರೂ ಎಲ್ಲೆಲ್ಲೂ ನಾನಾ ಸಂಕಷ್ಟವನ್ನು ಅನುಭವಿಸುವಂತಾಯಿತು. ಈ ಯಕಃಶ್ಚಿತ್ ವೈರಾಣು ನಾಳೆ ಎಂಬುದರ ಬಗೆಗೆ ಖಚಿತವಾಗಿ ಏನನ್ನೂ ಹೇಳಲಾಗದ ಸ್ಥಿತಿಗೆ ಇಡೀ ಮನುಕುಲವನ್ನು ದೂಡಿದೆ. ಈಗಲೂ ಕಷ್ಟ ಪರಂಪರೆ ಮುಗಿದಿಲ್ಲ. ಈ ಸಾಂಕ್ರಾಮಿಕದಿಂದ ಸೃಷ್ಟಿಯಾಗಿರುವ ಅನಿಶ್ಚಿತತೆಯ ನೆರಳು 2021ಕ್ಕೂ ಚಾಚಿಕೊಳ್ಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಲಸಿಕೆಗಳು ಬಂದು ವ್ಯಾಪಕವಾಗಿ ಜನರಿಗೆ ನೀಡಿದ ನಂತರ ಪರಿಸ್ಥಿತಿ ಸುಧಾರಿಸಬಹುದೆಂಬ ಆಶಾವಾದದಲ್ಲಿ 2021ಕ್ಕೆ ಪಾದಾರ್ಪಣೆ ಮಾಡಿದ್ದೇವೆ.

ಕೋವಿಡ್ ಪಿಡುಗಿನಿಂದಾಗಿ ಬದುಕು ದುಸ್ತರವಾದ ಸಂದರ್ಭದಲ್ಲಿ, ಬಳಗವು ತನ್ನದೇ ಆದ ಇತಿ–ಮಿತಿಯಲ್ಲಿ ಪರಿಸ್ಥಿತಿ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಅನೇಕ ಚಟುವಟಿಕೆಗಳನ್ನು ಸಂಯೋಜಿಸಿದೆ. ಯುವ ವಿಭಾಗದ ನೇತೃತ್ವದಲ್ಲಿ 'ಕೃಷ್ಣಸಂಧಾನ' ಎಂಬ ಯಕ್ಷಗಾನ ತಾಳ ಮದ್ದಳೆ ಕಾರ್ಯಕ್ರಮವನ್ನು ಸಂಯೋಜಿಸಿದ್ದು, ಅದನ್ನು ಯೂಟ್ಯೂಬ್, ವಾಟ್ಸಾಪ್ ಮೊದಲಾದ ಆಧುನಿಕ ಮಾಧ್ಯಮಗಳ ಮೂಲಕ ನಮ್ಮ ಸದಸ್ಯರು ವೀಕ್ಷಿಸಿದ್ದಾರೆ. ಪ್ರಥಮ ಬಾರಿಗೆ ಇಂತಹ ಪ್ರಯತ್ನವನ್ನು ಮಾಡಿ ನಮ್ಮ ಕೆಲವು ಸದಸ್ಯರಲ್ಲಿ ಸುಪ್ತವಾಗಿರುವ ಅರ್ಥಗಾರಿಕೆ ಪ್ರತಿಭೆಯು ಪ್ರಕಟವಾಗಲು ವೇದಿಕೆ ನಿರ್ಮಿಸಿಕೊಟ್ಟಿರುವ ಯುವಭಾಗಕ್ಕೆ ಶ್ಲಾಘನೆ ಸಲ್ಲಲೇಬೇಕು. ಬಳಗದ ಹೆಚ್ಚಿನ ಸದಸ್ಯರು ಈ ತಾಳಮದ್ದಲೆಯನ್ನು ವೀಕ್ಷಿಸಿ ಆಸ್ವಾದಿಸದ್ದಾರೆ ಎಂದು ನನ್ನ ನಂಬಿಕೆ.

ಪ್ರತಿವರ್ಷದಂತೆ ಯುವ ವಿಭಾಗದವರು 2021ನೇ ವರ್ಷದ ಆನಂದ ಬಳಗ ಕ್ಯಾಲೆಂಡರನ್ನು ಹೊರ ತಂದಿದ್ದು, ಈಗಾಗಲೇ ಇದು ಹೆಚ್ಚಿನ ಸದಸ್ಯರ ಮನೆ ಸೇರಿದೆ ಎಂದು ನಮ್ಮ ನಿರೀಕ್ಷೆ. ಸರ್ವಾಂಗ ಸುಂದರವಾಗಿ ಮತ್ತು ಮಾಹಿತಿಪೂರ್ಣವಾಗಿ ವಿನ್ಯಾಸಗೊಳಿಸಿರುವ ಕ್ಯಾಲೆಂಡರ್‌ಗಳ ಪ್ರತಿಯನ್ನು ಪಡೆಯದ ಸದಸ್ಯರು ಸಂಬಂಧಪಟ್ಟ ಕಾರ್ಯಕರ್ತರನ್ನು ಸಂಪರ್ಕಿಸಿ, ಸಕಾಲದಲ್ಲಿ ಪಡೆಯಬೇಕೆಂದು ವಿನಂತಿ. ಈ ವರ್ಷ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ 29 ವಿದ್ಯಾರ್ಥಿಗಳನ್ನು ಪುರಸ್ಕರಿಸಕಾಗಿದೆ. ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ನಗದು ಬಹುಮಾನವನ್ನು ಪ್ರಾಯೋಜಿಸಿದ ಭೀಮಾ ಫೌಂಡೇಶನ್‌ರವರಿಗೆ ಕೃತಜ್ಞತೆಗಳು. ಧಾರ್ಮಿಕ ವಿಭಾಗದವರು ಶ್ರೀ ದುರ್ಗಾ ನಮಸ್ಕಾರ ಪೂಜೆಯನ್ನು ಶ್ರೀ ವಿದ್ಯಾಪೀಠದಲ್ಲಿ ಭಕ್ತಿ–ಶ್ರದ್ಧೆಯಿಂದ ಸಂಯೋಜಿಸಿದ್ದರು. ಕೋವಿಡ್ ಮಾರ್ಗಸೂಚಿಯಿಂದಾಗಿ ಸರಳವಾದ ರೀತಿಯಲ್ಲಿ ಹಮ್ಮಿಕೊಳ್ಳುವುದು ಅನಿವಾರ್ಯವಾಗಿದ್ದು ಎಲ್ಲಾ ಸದಸ್ಯರಿಗೆ ಪಾಲ್ಗೊಳ್ಳುವ ಅವಕಾಶ ಕಲ್ಪಿಸಲಾಗಲಿಲ್ಲ. ಪ್ರಜ್ಞಾವಂತ ಸದಸ್ಯಬಂಧುಗಳು ಈ ಸಂದಿಗ್ಧತೆಯನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬ ಭರವಸೆ ನನಗಿದೆ.

ಬಳಗದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ದಿ.22.11.2020 ರಂದು ನಡೆದಿದ್ದು ಹಾಜರಾದ ಸದಸ್ಯರು, ಬಳಗದ ಮುನ್ನಡೆಗೆ ಕೆಲವಾರು ಸಲಹೆ–ಸೂಚನೆಗಳನ್ನು ನೀಡಿರುತ್ತಾರೆ. ಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ಕಾರ್ಯರೂಪಕ್ಕೆ ತಂದು, ಬಳಗವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಮುನ್ನಡೆಸುವ ಸಂಕಲ್ಪ ನಮ್ಮದು. ಭಗವಂತನ ಅನುಗ್ರಹ ಹಾಗೂ ನಿಮ್ಮೆಲ್ಲರ ಸಂಪೂರ್ಣ ಸಹಕಾರದಿಂದ ಇದು ಸಾಧ್ಯವಾಗಬಹುದೆಂಬ ವಿಶ್ವಾಸ ನಮಗಿದೆ.

ಶುಭಾಶಯಗಳೊಂದಿಗೆ,

**(ವಿಜಯಲಕ್ಷ್ಮಿ ಭಟ್ ಎಸ್.)**

## Executive Committee Members : 2020-2022

| Name | Contact Numbers |
|---|---|
| ***President*** | |
| Smt. Vijayalakshmi Bhat S. | 98441 52107 |
| ***Vice Presidents*** | |
| B. Ramachandra Upadhya | 99024 00072 |
| S. Haridas Upadhya | 94480 01892 |
| ***Secretary*** | |
| M.K. Gurumurthy | 98440 22692 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| Smt. Shobha Radhakrishna | 98447 25547 |
| **Convener, Religious Wing** | |
| P N Vishnumurthy Kuddannaya | 94803 05426 |
| **Convener, Youth Wing** | |
| K. Gopala Krishna | 99801 28049 |
| ***Convener, Edn. Assistance Programme*** | |
| Sharath Chandra S.N. | 98860 40271 |
| ***Convener, Public Relation Wing*** | |
| Y. Jayantha Rao | 94482 74519 |
| ***Convener, Membership Devt. Wing*** | |
| M. Krishna Prasad | 98450 18183 |
| ***Convener, Community Services*** | |
| Dr. K.N. Adiga Adoor | 94488 48154 |
| ***Convener, Media & Communications*** | |
| M. Dinesh Rao | 99456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Smt. Geetha Vasudeva Rao | 98808 99997 |
| H. Ramesh Bhat | 98450 24708 |
| P.C. Rao | 98444 46309 |
| T.S. Nagaraja Upadhyaya | 93412 26763 |
| M Mohan Rao | 98453 79956 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| U A P Ballal | 99860 28602 |
| S T R Madi | 99029 77948 |
| ***Special Invitees*** | |
| Smt. Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| Smt. Geetha P.R. Rao | 99459 38411 |
| Y. Radha Krishna | 98440 58851 |
| Prakash K Bhat | 98455 06777 |
| N Srinivasa Rao | 98455 22165 |
| Smt. Madhavi Ballal | 99860 39107 |
| Vishnu Sharan K. Bhat | 98862 69018 |
| Gururaj Pejavar | 98440 09293 |
| Madhava Upadhya | 94480 41424 |

ಒಳಪುಟಗಳಲ್ಲಿ.....


ಅಧ್ಯಕ್ಷರ ಮಾತು ... 1
ದುರ್ಗಾ ನಮಸ್ಕಾರ ... 3
ಕ್ಯಾಲೆಂಡರ್ 2021 ಬಿಡುಗಡೆ ... 4
ಸರ್ವ ಸದಸ್ಯರ ಸಭೆ ... 5
ವಿಶೇಷ ದಿನಗಳು ... 7
ಯುವ ವಿಭಾಗದಿಂದ ಯಕ್ಷಗಾನ ... 8
ಬಳಗದಿಂದ ಪ್ರತಿಭಾ ಪುರಸ್ಕಾರ ... 10
ತುಳು ಭಾಷೆ ಒಂದಿಷ್ಟು ಮಾಹಿತಿ ... 13
ಭಗವಂತನ ಸಾನ್ನಿಧ್ಯ – ಸಾಲಿಗ್ರಾಮ ... 14
ಕ್ಯಾಲೆಂಡರ್ ಪರಿಚಯ ... 16
Wealth Creation ... 20
ಸುದ್ದಿ ಸಂಗ್ರಹ ... 24


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ–ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ಧಿ–ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :


**ಎಂ. ಸತ್ಯನಾರಾಯಣ ಭಟ್**
"ಕೃಷ್ಣ ಕೃಪಾ", 12/1, 5ನೇ ಮೈನ್, ಇಟ್ಟುಮಡು
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085
E-mail: msbhat1958@gmail.com

# ಧಾರ್ಮಿಕ ವಿಭಾಗದಿಂದ ದುರ್ಗಾ ನಮಸ್ಕಾರ

ಕರಾವಳಿ ಪ್ರದೇಶದಲ್ಲಿ ಬಹಳ ವಿಶೇಷವಾಗಿ ಆಚರಣೆಯಲ್ಲಿರುವ ದುರ್ಗಾ ನಮಸ್ಕಾರ ಅಥವಾ ದೀಪ ನಮಸ್ಕಾರ ಪೂಜೆಯ ವೈಭವವನ್ನು ಬೆಂಗಳೂರಿನಲ್ಲಿರುವ ಬಳಗದ ಸದಸ್ಯರಿಗೆ ನೋಡುವ ಅವಕಾಶವನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಆನಂದ ಬಳಗದ ಧಾರ್ಮಿಕ ವಿಭಾಗವು ಕಳೆದ ಹಲವು ವರ್ಷಗಳಿಂದ ದುರ್ಗಾ ನಮಸ್ಕಾರವನ್ನು ನಡೆಸಿಕೊಂಡು ಬಂದಿದೆ. ಪ್ರತಿ ವರ್ಷವೂ ಈ ವಿಶೇಷ ಧಾರ್ಮಿಕ ಕಾರ್ಯಕ್ರಮದಲ್ಲಿ ಸುಮಾರು 500ಕ್ಕೂ ಮೀರಿ ಸದಸ್ಯರು ದುರ್ಗಾ ಪೂಜೆಯ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಿದ್ದರು.



ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯರವರಿಗೆ ಈ ವರ್ಷವೂ ದುರ್ಗಾ ಪೂಜೆಯನ್ನು ಸಂಭ್ರಮದಿಂದ ಆಚರಿಸುವ ಇರಾದೆ ಇದ್ದರು ಸಹಾ, ಕರೋನಾ ಮಹಾಮಾರಿಯ ಉಪಟಳದಿಂದಾಗಿ ಹಾಗೂ ಸರಕಾರ ಹೊರಡಿಸುವ ಕೋವಿಡ್ ಮಾರ್ಗಸೂಚಿಯಿಂದಾಗಿ ಇದು ಸಾಧ್ಯವಾಗಲಿಲ್ಲ. ಸಾಮಾನ್ಯವಾಗಿ ನಮ್ಮ ಆಟಿ ತಿಂಗಳಿನಲ್ಲಿ ದುರ್ಗಾ ನಮಸ್ಕಾರವನ್ನು ಹಮ್ಮಿಕೊಳ್ಳುವುದು ರೂಢಿಯಾಗಿದ್ದು ಆಗ ಕೋವಿಡ್‌ನ ಪ್ರಭಾವ ಅತ್ಯಂತ ತೀವ್ರವಾಗಿದ್ದು, ನವರಾತ್ರಿ ಸಂದರ್ಭದಲ್ಲಾದರೂ ಪರಿಸ್ಥಿತಿ ತುಸು ಸುಧಾರಣೆಯಾಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ವಿಷಮ ಪರಿಸ್ಥಿತಿ ಮತ್ತೂ ಮುಂದುವರಿದು, ದುರ್ಗಾ ನಮಸ್ಕಾರವನ್ನು ಪ್ರತಿವರ್ಷದಂತೆ ನಡೆಸಲು ಅಸಾಧ್ಯವಾದ ಅನಿವಾರ್ಯತೆಯಲ್ಲಿ ಸರಳ ರೀತಿಯಲ್ಲಾದರೂ ದುರ್ಗಾ ಸೇವೆಯನ್ನು ಮಾಡಲೇಬೇಕೆಂಬ ಉದ್ದೇಶದಿಂದ ದಿ.19.12.2020 ರಂದು ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ದುರ್ಗಾ ನಮಸ್ಕಾರವನ್ನು ಏರ್ಪಡಿಸಲಾಗಿತ್ತು. ಬಳಗದ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಅವರ ಕುಟುಂಬದವರ ಸಮ್ಮುಖದಲ್ಲಿ ನಡೆದ ದುರ್ಗಾಪೂಜೆಯ ಪ್ರಧಾನ ಪೌರೋಹಿತ್ಯವನ್ನು ವಿದ್ಯಾಪೀಠದ ಕಾರ್ಯದರ್ಶಿಯವರಾದ ವಿದ್ವಾನ್ ಯು. ಕೇಶವಾಚಾರ್ಯರು ನಿರ್ವಹಿಸಿದ್ದರು. ಅಂದು ಸಂಜೆ ಸುಮಾರು 4 ಗಂಟೆಯ ಹೊತ್ತಿಗೆ ವಿದ್ಯಾಪೀಠದ ಶ್ರೀ ರವಿಕಿರಣ್ ಆಚಾರ್ಯ ಮತ್ತು ತಂಡದವರು ಅತ್ಯಾಕರ್ಷಕವಾದ ರಂಗೋಲಿಯನ್ನು ಹಾಕಲಾರಂಭಿಸಿ, ಆರು ಗಂಟೆಯ ಸುಮಾರಿಗೆ ಪೂಜೆ ಆರಂಭವಾಯಿತು.

ಕತೃಗಳಾಗಿ ಶ್ರೀ ವಿಷ್ಣುಮೂರ್ತಿ ಕುದ್ದಣ್ಣಾಯ ಮತ್ತು ಶ್ರೀಮತಿ ವಂದನಾ ಮೂರ್ತಿಯವರು ಪೂಜೆಯನ್ನು ನೆರವೇರಿಸಿದರೆ, ಬಳಗದ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಭಟ್, ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಮತ್ತು ಶ್ರೀ ಹರಿದಾಸ ಉಪಾಧ್ಯ, ಕಾರ್ಯದರ್ಶಿ ಶ್ರೀ ಎಂ.ಕೆ. ಗುರುಮೂರ್ತಿ, ಕೋಶಾಧಿಕಾರಿ ಶ್ರೀ ಬಾಲಚಂದ್ರ ತೋಳ್ಪಾಡಿ ಹಾಗೂ ಕಾರ್ಯಕಾರಿ ಸಮಿತಿಯ ಇತರ ಸದಸ್ಯರು ಸಕ್ರಿಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ದೀಪಗಳ ಸಾಲು ಮತ್ತು ಪುಷ್ಪಗಳ ರಾಶಿಯಿಂದ ಸಾಲಂಕೃತವಾದ ದುರ್ಗಾಮಾತೆಯ ಮಹಾ ಮಂಗಳಾರತಿ ನಂತರ ವಿದ್ವಾನ್ ಕೇಶವಾಚಾರ್ಯರು ದುರ್ಗಾಪೂಜೆಯ ಮಹತ್ವ ಮತ್ತು ಫಲಶ್ರುತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ, ಬಳಗದ ಮುಂದಿನ ಎಲ್ಲಾ ಚಟುವಟಿಕೆಗಳೂ ಸಾಂಗವಾಗಿ ನೆರವೇರಲಿ, ಬಳಗಕ್ಕೆ ಮತ್ತು ಅದರ ಸರ್ವಸದಸ್ಯರಿಗೆ ಶ್ರೀದೇವಿ ಸನ್ಮಂಗಳವನ್ನುಂಟು ಮಾಡಲಿ ಎಂದು ಹಾರೈಸಿದರು ಬಯಸಿದರು. ಸುವಾಸಿನಿ ಪೂಜೆ ಮತ್ತು ಕನ್ನಿಕಾ ಆರಾಧನೆ ಹಾಗೂ ತೀರ್ಥಪ್ರಸಾದ ವಿತರಣೆ ನಂತರ ಎಲ್ಲರಿಗೂ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸರಳವಾಗಿಯಾದರೂ ಬಹಳ ಅಚ್ಚುಕಟ್ಟಾಗಿ ಮತ್ತು ಶ್ರದ್ಧೆಯಿಂದ ದುರ್ಗಾ ನಮಸ್ಕಾರವನ್ನು ಏರ್ಪಡಿಸಲು ಶ್ರಮಿಸಿದ ಶ್ರೀ ವಿಷ್ಣುಮೂರ್ತಿ ಮತ್ತು ಅವರ ತಂಡಕ್ಕೆ ಶ್ಲಾಘನೆಗಳು.

# ಆನಂದ ಬಳಗ ಕ್ಯಾಲೆಂಡರ್–2021 ಬಿಡುಗಡೆ

ಆನಂದ ಬಳಗದ ಯುವ ವಿಭಾಗವು ಕಳೆದ ಸುಮಾರು ವರ್ಷಗಳಿಂದ ಕ್ಯಾಲೆಂಡರ್‌ನ್ನು ತಯಾರಿಸಿ ಬಳಗದ ಸದಸ್ಯರಿಗೆ ಉಚಿತವಾಗಿ ವಿತರಣೆ ಮಾಡುತ್ತಾ ಇದೆ. 2021ರ ಕ್ಯಾಲೆಂಡರ್‌ನ್ನು ಹೋಟೆಲ್ ಅಜಂತಾದಲ್ಲಿ ದಿ.12.12.2020ರಂದು ನಡೆದ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯ ಸಂದರ್ಭದಲ್ಲಿ ಔಪಚಾರಿಕವಾಗಿ ಬಿಡುಗಡೆ ಮಾಡಲಾಯಿತು. ಸುಂದರವಾದ ಮತ್ತು ಸದಸ್ಯರಿಗೆ ಉಪಯುಕ್ತ ಮಾಹಿತಿಗಳನ್ನು ಒಳಗೊಂಡ ಹೊಸ ವರ್ಷದ ಕ್ಯಾಲೆಂಡರ್‌ಗಳನ್ನು ಬಿಡುಗಡೆಗೊಳಿಸಿದ ಆನಂದ ಬಳಗದ ಅಧ್ಯಕ್ಷೆಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರು ಕ್ಯಾಲೆಂಡರ್‌ನ್ನು ಅಚ್ಚುಕಟ್ಟಾಗಿ ವಿನ್ಯಾಸಗೊಳಿಸಿ, ಸಕಾಲದಲ್ಲಿ ಬಿಡುಗಡೆ ಮಾಡಲು ಶ್ರಮಿಸಿದ ಯುವ ವಿಭಾಗದ ಸಂಚಾಲಕರಾದ ಶ್ರೀ ಗೋಪಾಲಕೃಷ್ಣ ಕುಂಜತ್ತಾಯ ಮತ್ತು ಅವರ ಕಾರ್ಯ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಬಳಗದ ಮಾಜಿ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ, ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಮತ್ತು ಶ್ರೀ ಎಸ್. ಹರಿದಾಸ್ ಉಪಾಧ್ಯ, ಕಾರ್ಯದರ್ಶಿ ಶ್ರೀ ಎಂ.ಕೆ. ಗುರುಮೂರ್ತಿ ಹಾಗೂ ಕೋಶಾಧಿಕಾರಿ ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿಯವರು ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕ್ಯಾಲೆಂಡರ್ – 2021ರ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದ ಶ್ರೀ ಗೋಪಾಲಕೃಷ್ಣ ಕುಂಜತ್ತಾಯರವರು ಈ ವರ್ಷದ ಕ್ಯಾಲೆಂಡರ್‌ನಲ್ಲಿ ನಮ್ಮೂರಿನ ಪ್ರಸಿದ್ಧ ಮಂಗಳಾದೇವಿ, ಪುತ್ತೂರು ಮಹಾಲಿಂಗೇಶ್ವರ, ಪೊಳಲಿ, ಸೌತಡ್ಕ, ಕಟೀಲು, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಗಳ ಬಗ್ಗೆ ಕಿರು ಮಾಹಿತಿಯನ್ನು ನೀಡಿರುವುದಲ್ಲದೆ ಬೆಂಗಳೂರಿನಲ್ಲಿರುವ ಪೂರ್ಣಪ್ರಜ್ಞ ವಿದ್ಯಾಪೀಠ, ಪುತ್ತಿಗೆ ಮಠ ಮತ್ತು ಪಲಿಮಾರು ಮಠದ ಬಗ್ಗೆಯೂ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದ್ದು, ಇದು ಸದಸ್ಯರಿಗೆ ಉಪಯುಕ್ತವಾಗಲಿದೆ ಎಂದು ವಿವರಿಸಿದರು. ಕ್ಯಾಲೆಂಡರ್ ಮುದ್ರಣದ ವೆಚ್ಚವನ್ನು 21 ಜಾಹೀರಾತುದಾರರು ಭರಿಸಿದ್ದು ಇದರಿಂದಾಗಿ ಕ್ಯಾಲೆಂಡರ್‌ಗಳನ್ನು ಸದಸ್ಯರಿಗೆ ಉಚಿತವಾಗಿ ನೀಡಲು ಸಾಧ್ಯವಾಗಿದೆ ಎಂದು ಹೇಳಿ, ಜಾಹೀರಾತುದಾರರಿಗೆ ಧನ್ಯವಾದ ಅರ್ಪಿಸಿದರು.

ಬಳಗದ ಹೊಸ ಕ್ಯಾಲೆಂಡರ್‌ಗಳನ್ನು ಎಲ್ಲಾ ಸದಸ್ಯರಿಗೆ ಸಕಾಲದಲ್ಲಿ ತಲುಪಿಸುವ ಉದ್ದೇಶದಿಂದ ಕ್ಯಾಲೆಂಡರ್ ವಿತರಣೆಗೆ ಈ ಕೆಳಗಿನ ವ್ಯವಸ್ಥೆಯನ್ನು ಮಾಡಲಾಗಿದೆ. ಸದಸ್ಯರು ತಮಗೆ ಅನುಕೂಲವಾದ ವಿಳಾಸವನ್ನು ಸಂಪರ್ಕಿಸಿ ಕ್ಯಾಲೆಂಡರ್‌ನ ಪ್ರತಿಯನ್ನು ಪಡೆದುಕೊಳ್ಳಬೇಕಾಗಿ ಯುವ ವಿಭಾಗದ ವಿನಂತಿ.

| **ಹೆಸರು ಮತ್ತು ಸಂಪರ್ಕ ಸಂಖ್ಯೆ** | **ಸೂಚಿತ ಪ್ರದೇಶಗಳು** |
|---|---|
| 1. ಎಂ.ಕೆ. ಗುರುಮೂರ್ತಿ (9844022692/ 7760998652) | ಪದ್ಮನಾಭನಗರ, ಕತ್ರಿಗುಪ್ಪೆ, ಜೆ.ಪಿ.ನಗರ, ಜಯನಗರ ಇತ್ಯಾದಿ |
| 2. ಬಿ.ಎಸ್. ಬಾಲಚಂದ್ರ ತೋಳ್ಪಾಡಿ (9448134268) | ಗಿರಿನಗರ, ಬನಶಂಕರಿ, ಬ್ಯಾಂಕ್‌ಕಾಲೋನಿ, ಶ್ರೀನಗರ, ಹನುಮಂತನಗರ ಇತ್ಯಾದಿ |
| 3. ಎಂ. ದಿನೇಶ್ ರಾವ್ (9945688955) | ರಾಜಾಜಿನಗರ, ಮಲ್ಲೇಶ್ವರಂ, ಯಶವಂತಪುರ, ಟಿ. ದಾಸರಹಳ್ಳಿ ಇತ್ಯಾದಿ |
| 4. ಎಂ. ಕೃಷ್ಣ ಪ್ರಸಾದ್ (9845018183) | ಶಿವಾಜಿನಗರ, ವಸಂತನಗರ, ಎಂ.ಜಿ.ರಸ್ತೆ, ಆರ್.ಟಿ.ನಗರ ಇತ್ಯಾದಿ |
| 5. ಮಾಧವ ಉಪಾಧ್ಯ (9448041424) | ಕೆ.ಹೆಚ್.ರಸ್ತೆ, ವಿಲ್ಸನ್ ಗಾರ್ಡನ್, ರಿಚ್‌ಮಂಡ್ ರಸ್ತೆ, ಲಾಲ್‌ಬಾಗ್, ಕೋರಮಂಗಲ ಇತ್ಯಾದಿ |
| 6. ವೈ. ಜಯಂತರಾವ್ (9448274519) | ಕಾಟನ್ ಪೇಟೆ, ಬಿನ್ನಿಮಿಲ್, ಚಾಮರಾಜಪೇಟೆ, ಮೆಜೆಸ್ಟಿಕ್ ಇತ್ಯಾದಿ |
| 7. ಗೋಪಾಲಕೃಷ್ಣ ಕುಂಜತ್ತಾಯ (9990128059) | ರಾಮಮೂರ್ತಿನಗರ, ಕೆ.ಆರ್.ಪುರಂ, ಇಂದಿರಾನಗರ, ಬಾಣಸವಾಡಿ ಇತ್ಯಾದಿ |

ಕ್ಯಾಲೆಂಡರ್‌ನ ಪ್ರತಿಯನ್ನು ಈಗಾಗಲೇ ಪಡೆಯದವರು ದಯವಿಟ್ಟು ಈ ಕೂಡಲೇ ಮೇಲ್ಕಾಣಿಸಿದ ಯಾವುದೇ ಕಾರ್ಯಕರ್ತರನ್ನು ಸಂಪರ್ಕಿಸಿ, ತಮ್ಮ ಪ್ರತಿಯನ್ನು ಪಡೆದುಕೊಳ್ಳಬೇಕಾಗಿ ಕೋರಲಾಗಿದೆ.

**ಗೋಪಾಲಕೃಷ್ಣ ಕುಂಜತ್ತಾಯ**
ಸಂಚಾಲಕರು, ಯುವ ವಿಭಾಗ

# 32ನೇಯ ವಾರ್ಷಿಕ ಸರ್ವಸದಸ್ಯರ ಸಭೆ

ದಿನಾಂಕ 22.10.2020ರ ಭಾನುವಾರದಂದು ಹೋಟೆಲ್ ಅಜಂತದ ಸಭಾಂಗಣದಲ್ಲಿ ಬೆಳಿಗ್ಗೆ ಘಂಟೆ 10ಕ್ಕೆ ಸರಿಯಾಗಿ ಆನಂದ ಬಳಗದ 32ನೆಯ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಜರಗಿತು. ವೇದಿಕೆಯಲ್ಲಿ ಬಳಗದ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮೀ ಭಟ್, ಉಪಾಧ್ಯಕ್ಷರುಗಳಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಹಾಗೂ ಶ್ರೀ ಎಸ್. ಹರಿದಾಸ ಉಪಾಧ್ಯ, ಕಾರ್ಯದರ್ಶಿಯವರಾದ ಶ್ರೀ ಎಂ.ಕೆ. ಗುರುಮೂರ್ತಿ, ಕೋಶಾಧಿಕಾರಿ ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ ಮತ್ತು ಮಾಜಿ ಅಧ್ಯಕ್ಷರುಗಳಾದ ಶ್ರೀ ಅನಂತ ಪದ್ಮಾನಭ ಬಲ್ಲಾಳ್ ಹಾಗೂ ಶ್ರೀ ಪಿ. ಸುಬ್ರಮಣ್ಯ ಬಾಗಿಲ್ತಾಯರವರು ಉಪಸ್ಥಿತರಿದ್ದರು.



ಶ್ರೀ ಹೆಚ್. ರಮೇಶ್ ಭಟ್‌ರವರ ಪ್ರಾರ್ಥನೆ ಯೊಂದಿಗೆ ಸಭೆಯು ಆರಂಭಗೊಂಡಿತು. ಕನಿಷ್ಟ ನಿಗದಿತ ಹಾಜರಾತಿಯನ್ನು ಖಚಿತಪಡಿಸಿಕೊಂಡ ಅಧ್ಯಕ್ಷರು ವಾರ್ಷಿಕ ಮಹಾಸಭೆಗೆ ವಿಧ್ಯುಕ್ತವಾಗಿ ಚಾಲನೆ ನೀಡಿದರು. ಕಾರ್ಯದರ್ಶಿಯವರು ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸಿದರು.

ಶ್ರೀ ಬಾ. ರಾಮಚಂದ್ರ ಉಪಾಧ್ಯರು ಆಗಮಿಸಿದ ಬಳಗದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.

ದಿನಾಂಕ 29.12.2019ರಂದು ಹರಿಪಾದ ಸೇರಿದ ಆನಂದ ಬಳಗದ ಸ್ಥಾಪನೆಗೆ ಕಾರಣಕರ್ತರಾದ ನಮ್ಮ ಗುರುಗಳಾದ ಪೇಜಾವರ ಮಠಾಧೀಶ ಪೂಜ್ಯ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು ಹಾಗೆಯೇ ಕಳೆದ ಒಂದು ವರ್ಷದಲ್ಲಿ ಇಹಲೋಕವನ್ನು ತ್ಯಜಿಸಿದ

ಎಡನೀರು ಮಠದ ಶ್ರೀ ಕೇಶವಾನಂದ ತೀರ್ಥರು, ಮಾಜಿ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ, ಖ್ಯಾತ ಗಾಯಕ ಶ್ರೀ ಎಸ್.ಪಿ. ಬಾಲಸುಬ್ರಮಣ್ಯಂ, ಹಾಗೂ ಬಳಗದ ಸದಸ್ಯರಾದ ಶ್ರೀ ಕೆ. ಸದಾಶಿವ ರಾವ್, ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾವ್, ಶ್ರೀ ಇನ್ನ ವಾಸುದೇವ ಆಚಾರ್ಯ, ಶ್ರೀಮತಿ ಕಿಶೋರಿ ಬಲ್ಲಾಳ್, ಶ್ರೀಮತಿ ಶ್ಯಾಮಲ ಗಣಪತಿ ರಾವ್, ಶ್ರೀ ಲಕ್ಷ್ಮೀ ನಾರಾಯಣ ಕೊಳತ್ತಾಯ, ಶ್ರೀ ಕೃಷ್ಣಮೂರ್ತಿ ಭಟ್, ಶ್ರೀ ಹೆಚ್.ಬಿ.ಎಲ್. ರಾವ್ ಮುಂಬೈ, ಶ್ರೀಮತಿ ಗೀತಾ ಶ್ರೀನಿವಾಸ ರಾವ್, ಶ್ರೀ ಪಿ. ಗೋಪಾಲಕೃಷ್ಣ ಸಾಮುಕ, ಶ್ರೀ ಕೆ.ಪಿ. ಸುಬ್ರಾಯ, ಶ್ರೀಮತಿ ಕೃಷ್ಣ ಕುಮಾರಿ, ಶ್ರೀ ರಾಜಾರಾವ್ ಯು.ಎ., ವಿದ್ವಾನ್ ವಾಗೀಶ ಭಟ್, ಶ್ರೀ ಅನಂತ ಕೃಷ್ಣ ಭಟ್, ಶ್ರೀ ಪಿ. ರಾಘವೇಂದ್ರ ಆಚಾರ್. ಇವರೆಲ್ಲರ ಸದ್ಗತಿಗಾಗಿ ಒಂದು ನಿಮಿಷದ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

2018–19ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ವರದಿಯನ್ನು ಕಾರ್ಯದರ್ಶಿ ಶ್ರೀ ಗುರುಮೂರ್ತಿಯವರು, ಆನಂದ ಬಳಗದ 2019–20ನೇ ವಾರ್ಷಿಕ ವರದಿಯನ್ನು ಜಂಟಿ ಕಾರ್ಯದರ್ಶಿ ಶ್ರೀ ಸಂದೀಪ್‌ರಾವ್‌ರವರು ಹಾಗೂ 2019–20ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆಯನ್ನು ಕೋಶಾಧಿಕಾರಿ ಶ್ರೀ ಬಾಲಚಂದ್ರ ತೋಲ್ಪಾಡಿಯವರು ಓದಿ ಅನುಮೋದನೆಗಾಗಿ ಸಭೆಯ ಮುಂದಿಟ್ಟರು. ಎಲ್ಲಾ ಮೂರು ವರದಿಗಳ ಬಗ್ಗೆ ಬಳಗದ ಸದಸ್ಯರ ಅನಿಸಿಕೆಗಳನ್ನು ಆಹ್ವಾನಿಸಲಾಯಿತು.

ಸದ್ಯರಾದ ಶ್ರೀ ಎಂ. ಮೋಹನ್‌ರಾವ್‌ರವರು ಮಕ್ಕಳ ಪ್ರತಿಭಾ ಸ್ಪರ್ಧೆ ಕಾರ್ಯಕ್ರಮಕ್ಕಾಗಿ ಎಡಿಎ ರಂಗಮಂದಿರಕ್ಕೆ ನೀಡಿದ ರೂ.26,000/–ಗಳ ಬಗ್ಗೆ ಪ್ರಸ್ತಾಪಿಸಿದರು. ಕೋಶಾಧಿಕಾರಿಗಳು ಉತ್ತರಿಸಿ, ಕೋವಿಡ್–19 ನಿಂದಾಗಿ ಈ ಕಾರ್ಯಕ್ರಮವು ರದ್ದಾದ ಕಾರಣ ಈ ಮೊತ್ತವನ್ನು ಹಿಂಪಡೆಯಲಾಗಿದೆ. ಆದುದರಿಂದ ಮುಂದಿನ ವರ್ಷದ ಲೆಕ್ಕಪತ್ರದಲ್ಲಿ ಇದನ್ನು ಸೇರಿಸಲಾಗುವುದು ಎಂದರು.

ಬಳಗದ ಸದಸ್ಯರೊಬ್ಬರು ತಮ್ಮ ಪತ್ರದಲ್ಲಿ ಭೃಗುವಾಣಿ ಜಾಹೀರಾತಿನ ಬಾಕಿ ಉಳಿದಿರುವ ಮೊತ್ತ ಸುಮಾರು ರೂ.56,000/– ವನ್ನು ವಜಾ ಮಾಡುವುದು ಸೂಕ್ತವಲ್ಲ ಎಂದು ಸೂಚಿಸಿದರು. ಇದಕ್ಕುತ್ತರವಾಗಿ ಕೋಶಾಧಿಕಾರಿಗಳು ತಮ್ಮ ಪ್ರಯತ್ನದಿಂದ ಸುಮಾರು ಒಂದು ಲಕ್ಷ ರೂಪಾಯಿಗಳ ಜಾಹೀರಾತು ಬಾಕಿ ಮೊತ್ತವನ್ನು ಸಂಗ್ರಹ ಮಾಡಲಾಗಿದೆ. ಉಳಿದ ರೂ.56,000/– ಮೊತ್ತವು ತುಂಬಾ ಹಳೆಯದಾದ ಕಾರಣ ಸಂಗ್ರಹಿಸಲು ಕಷ್ಟವಾಗುತ್ತದೆ.

ಆದುದರಿಂದ ಈ ಮೊತ್ತವನ್ನು ವಜಾ ಮಾಡಲು ಸಭೆಯ ಅನುಮತಿ ಕೋರಿದರು. ಶ್ರೀ ಎಸ್.ಎನ್. ಶರತ್‌ಚಂದ್ರ ಹಾಗೂ ಶ್ರೀ ಮೋಹನ್ ರಾವ್‌ರವರು ಇದನ್ನು ಅನುಮೋದಿಸಿದರು.

ಶ್ರೀ ಶರತ್‌ಚಂದ್ರರವರು ವ್ಯಾಸಂಗ ಸಹಾಯ ಯೋಜನೆಯ ಮೂಲಕ ನೀಡಿರುವ ಮೊತ್ತದಲ್ಲಿ ಕಳೆದೆರಡು ತಿಂಗಳಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಲಾಗಿದೆ. ಉಳಿದ ಮೊತ್ತವನ್ನು ಸಂಗ್ರಹ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಸಭೆಗೆ ತಿಳಿಸಿದರು.

ಸರ್ವ ಸದಸ್ಯರ ಮಹಾಸಭೆಯ ವರದಿಯನ್ನು ಶ್ರೀ ಟಿ.ವಿ. ಗುರುರಾಜ್‌ರವರು ಸೂಚಿಸಿ ಶ್ರೀ ರಾಜೇಶ್‌ರಾವ್ ರವರು ಅನವೋದಿಸಿದರು, ಬಳಗದ ವಾರ್ಷಿಕ ವರದಿಯನ್ನು ಶ್ರೀ ಬಿ.ಆರ್. ತಂತ್ರಿಯವರು ಸೂಚಿಸಿದರು ಹಾಗೂ ಶ್ರೀ ರಾಮಮೂರ್ತಿಯವರು ಅನುಮೋದಿಸಿದರು ಮತ್ತು ಪರಿಶೋಧಿತ ಲೆಕ್ಕಪತ್ರಗಳನ್ನು ಶ್ರೀಮತಿ ಕುಸುಮಾ ರಾವ್‌ರವರು ಸೂಚಿಸಿದರು ಹಾಗೂ ಶ್ರೀ ಬಾಲಕೃಷ್ಣ ಉಪಾಧ್ಯಾಯರು ಅನುಮೋದಿಸಿದರು.

2020–21ನೇ ವರ್ಷಕ್ಕೆ ಬಳಗದ ಲೆಕ್ಕ ಪರಿಶೋಧಕರಾಗಿ ಜಿ.ವಿ. ಆಚಾರ್ಯ & ಕೊ. ಅವರನ್ನು ನೇಮಿಸಬಹುದೆಂದು ಶ್ರೀ ವೈ. ಜಯಂತ್‌ರಾವ್‌ರವರು ಸೂಚಿಸಿ ಡಾ.ಕೆ.ಎನ್. ಅಡಿಗರವರು ಅನುಮೋದಿಸಿದರು ಹಾಗೂ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಇತರ ವಿಚಾರಗಳಲ್ಲಿ ಡಾ.ಕೆ.ಎನ್. ಅಡಿಗರರು ಮಾತನಾಡಿ ಕೋವಿಡ್–19 ಸಂದರ್ಭದಲ್ಲಿ ವಾರ್ಷಿಕ ಸಭೆಯಲ್ಲಿ ಇಷ್ಟು ಜನ ಬಳಗದ ಸದಸ್ಯರ ಭಾಗವಹಿಸುವಿಕೆ ಅದರಲ್ಲೂ ಕಾರ್ಯಕಾರಿ ಸಮಿತಿಯ ಹೆಚ್ಚಿನ ಸದಸ್ಯರ ಉಪಸ್ಥಿತಿ ಸಂತೋಷ ಉಂಟುಮಾಡಿದೆ ಎಂದರು. ಈ ಸಂದರ್ಭದಲ್ಲಿ ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾವ್‌ರವರು ಆನಂದ ಬಳಗಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿಕೊಂಡರು. ಶ್ರೀಮತಿ ಗೀತಾ ಪಿ.ಆರ್. ರಾವ್ ರವರು ಯುವ ವಿಭಾಗದಿಂದ ಬಿಡುಗಡೆಗೊಳಿಸಿದ 2020ರ ಕ್ಯಾಲೆಂಡರ್‌ನಲ್ಲಿ ಕೆಲವೊಂದು ಲೋಪದೋಷ ಗಳಿದ್ದು ಅವುಗಳನ್ನು 2021ರ ಕ್ಯಾಲೆಂಡರ್‌ನಲ್ಲಿ ಸರಿಪಡಿಸಬೇಕೆಂದು ಸಲಹೆ ನೀಡಿದರು.

ಭೃಗುವಾಣಿಯ ಸಂಪಾದಕರಾದ ಶ್ರೀ ಎಂ. ಸತ್ಯನಾರಾಯಣ ಭಟ್‌ರವರು ಬಳಗದ ಓರ್ವ ಸದಸ್ಯರ ಪತ್ರಕ್ಕೆ ಉತ್ತರಿಸುತ್ತಾ ಭೃಗುವಾಣಿಯ ಪ್ರತಿ ಸಂಚಿಕೆಯಲ್ಲಿ ಸುಮಾರು ರೂ.27,000/– ದಷ್ಟು ಜಾಹೀರಾತಿಗೆ ಅವಕಾಶವಿದೆ ಆದರೆ ಭೃಗುವಾಣಿಯ ಮುದ್ರಣ ಹಾಗೂ ಅಂಚೆ ವೆಚ್ಚ ರೂ.35,000/– ದಷ್ಟಿದೆ. ಆದರೆ ಭೃಗುವಾಣಿಯು ಆನಂದ ಬಳಗದ ಮುಖವಾಣಿ ಆಗಿರುವುದರಿಂದ ಇದನ್ನು ಕೇವಲ ವ್ಯಾವಹಾರಿಕ ದೃಷ್ಟಿಯಲ್ಲಿ ನೋಡಬಾರದೆಂದು ತಿಳಿಸಿದರು. ಹಾಗೆಯೇ ಬಳಗದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳು ಭೃಗುವಾಣಿಯಲ್ಲಿ ಪ್ರಕಟವಾಗುವುದರಿಂದ ಇದಕ್ಕೆ ತಗಲುವ ಮುದ್ರಣ ಹಾಗೂ ಅಂಚೆ ವೆಚ್ಚ ಬಳಗಕ್ಕೆ ಉಳಿತಾಯವಾಗಿದೆ ಎಂದು ವಿವರಿಸಿದರು. ಈ ವಿಚಾರದಲ್ಲಿ ಶ್ರೀ ಪಿ.ಎಸ್. ಬಾಗಿಲ್ತಾಯರವರು ಸಹಮತವನ್ನು ವ್ಯಕ್ತಪಡಿಸಿದರು.

ಬಳಗದ ಹಿರಿಯ ಸದಸ್ಯರಾದ ಶ್ರೀ ಬಿ.ಆರ್. ತಂತ್ರಿಯವರು ಮಾತನಾಡಿ, ಅಧ್ಯಕ್ಷ ಸ್ಥಾನ ಅಲಂಕರಿಸಿದ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರಿಗೆ ಶುಭ ಹಾರೈಸಲು ತಾನು ಸಭೆಗೆ ಬಂದಿರುವುದಾಗಿ ತಿಳಿಸಿದರು. ಇದೇ ಸಮಯದಲ್ಲಿ "ನನ್ನ ಜೀವನ ನಿನ್ನದು ಶ್ರೀ ಕೃಷ್ಣ" ಎಂಬ ಸ್ವರಚಿತ ಕವನವನ್ನು ಭಾವಪೂರ್ಣವಾಗಿ ಹಾಡಿದರು.

ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಬಳಗವು ಸಾಂಸ್ಕೃತಿಕ, ಧಾರ್ಮಿಕ ಹಾಗೂ ಮನೋರಂಜನಾ ಕಾರ್ಯಕ್ರಮಗಳಿಗೆ ಸೀಮಿತವಾಗದೆ ಸಮಾಜಮುಖಿ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ಕೊಟ್ಟು ಸಮಾಜದ ಅಭಿವೃದ್ಧಿಗೆ ಶ್ರಮಿಸುವುದು ಅಗತ್ಯ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಬಳಗದ ಯುವಕ ಯುವತಿಯರು ಹೆಚ್ಚು ಸಕ್ರಿಯರಾಗಿ ಬಳಗದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಹಕರಿಸಬೇಕೆಂದು ಕೋರಿದರು. ಹಾಗೆಯೇ ಮಹಿಳಾ ವಿಭಾಗದವರು ಬಳಗಕ್ಕೆ ನೀಡುತ್ತಿರುವ ಕೊಡುಗೆಯನ್ನು ಶ್ಲಾಘಿಸಿ ಶುಭ ಹಾರೈಸಿದರು.

ಬಳಗದ ಉಪಾಧ್ಯಕ್ಷರಾದ ಶ್ರೀ ಹರಿದಾಸ ಉಪಾಧ್ಯರವರು ಧನ್ಯವಾದ ಸಮರ್ಪಣೆ ಮಾಡಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀ ಸತ್ಯನಾರಾಯಣ ಭಟ್‌ರವರು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಸಭೆಯ ಆರಂಭದಲ್ಲಿ ಹೋಟೆಲ್ ಅಜಂತಾದ ಸೌಜನ್ಯದಿಂದ ರುಚಿಕರವಾದ ಫಲಹಾರ ಹಾಗೂ ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲರಿಗೂ ಪುಷ್ಕಳವಾದ ಭೋಜನದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

**– ಸಂದೀಪ್ ರಾವ್ .ಎ**

## ಜನವರಿ–ಏಪ್ರಿಲ್ 2021ರ ಅವಧಿಯ ವಿಶೇಷ ದಿನಗಳು

| | |
|---|---|
| ಜನವರಿ 14, 2021, ಗುರು | ಮಕರ ಸಂಕ್ರಮಣ |
| ಜನವರಿ 22, ಶುಕ್ರವಾರ | ಸೌರ ಮಧ್ವನವಮೀ |
| ಜನವರಿ 24, ಭಾನುವಾರ | ಸರ್ವೈಕಾದಶೀ |
| ಜನವರಿ 28, ಗುರುವಾರ | ಹುಣ್ಣಿಮೆ |
| ಫೆಬ್ರವರಿ 8, ಸೋಮವಾರ | ವೈಷ್ಣವೈಕಾದಶೀ |
| ಫೆಬ್ರವರಿ 11, ಗುರುವಾರ | ಅಮಾವಾಸ್ಯೆ |
| ಫೆಬ್ರವರಿ 12, ಶುಕ್ರವಾರ | ಶಿಶಿರ ಋತು, ಮಾಘ ಮಾಸಾರಂಭ ಕುಂಭ ಸಂಕ್ರಮಣ |
| ಫೆಬ್ರವರಿ 23, ಮಂಗಳವಾರ | ಸರ್ವೈಕಾದಶೀ |
| ಫೆಬ್ರವರಿ 27, ಶನಿವಾರ | ಹುಣ್ಣಿಮೆ |
| ಮಾರ್ಚ್ 9, ಮಂಗಳವಾರ | ಸರ್ವೈಕಾದಶೀ |
| ಮಾರ್ಚ್ 11, ಗುರುವಾರ | ಮಹಾಶಿವರಾತ್ರಿ |
| ಮಾರ್ಚ್ 13, ಶನಿವಾರ | ಅಮಾವಾಸ್ಯೆ |
| ಮಾರ್ಚ್ 14, ಭಾನುವಾರ | ಫಾಲ್ಗುಣ ಮಾಸಾರಂಭ |
| ಮಾರ್ಚ್ 25, ಗುರುವಾರ | ಸರ್ವೈಕಾದಶೀ |
| ಮಾರ್ಚ್ 28, ಭಾನುವಾರ | ಹುಣ್ಣಿಮೆ |
| ಏಪ್ರಿಲ್ 7, ಬುಧವಾರ | ಸರ್ವೈಕಾದಶೀ |
| ಏಪ್ರಿಲ್ 12, ಸೋಮವಾರ | ಸೋಮವತೀ ಅಮಾವಾಸ್ಯೆ |
| ಏಪ್ರಿಲ್ 13, ಮಂಗಳವಾರ | ಮೇಷ ಸಂಕ್ರಮಣ, ಚಾಂದ್ರ ಯುಗಾದಿ ಪ್ಲವ ಸಂವತ್ಸರ ವಸಂತಋತು ಚೈತ್ರ ಮಾಸಾರಂಭ |
| ಏಪ್ರಿಲ್ 14, ಬುಧವಾರ | ಸೌರಯುಗಾದಿ (ವಿಷು) |

**(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಂಗಂ)**

**ಮಂಕು ಅಥವಾ ಮಂಕ ಅಂದರೆ ಶಿವ ಅಂತರ್ಥ. ಮಂಕು ಹಿಡಿದ ಹಾಗೆ ಕುಳಿತಿರುವುದು ಅಂದರೆ ಸಮಾಧಿ ಸ್ಥಿತಿಯಲ್ಲಿ ಕುಳಿತ ಹಾಗೆ ಕುಳಿತಿರುವುದು ಅಂತ. ಹಾಗೆ ಕುಳಿತಿರುವವನು ಶಿವ. ತಿಮ್ಮ ಅಂದರೆ ತಿಮ್ಮಪ್ಪ ಅರ್ಥಾತ್ ಹರಿ.. ಕಗ್ಗ ಅಂದರೆ ರಹಸ್ಯ.. ಮಂಕುತಿಮ್ಮನ ಕಗ್ಗ ಅಂದರೆ ಹರಿಹರರ ರಹಸ್ಯ... ಮಂಕುತಿಮ್ಮನ ಕಗ್ಗಕ್ಕೆ ಹೊಸ ವ್ಯಾಖ್ಯಾನ..?**

**(ವ್ಯಾಟ್ಸಾಪ್)**

## ಪ್ರತ್ಯಕ್ಷದೇವ ರವಿ–ನಿತ್ಯ ರಕ್ಷಿಸು ಭುವಿ

(ಮಕರ ಸಂಕ್ರಾಂತಿಯ
ಸಂದರ್ಭದಲ್ಲಿ
ಶ್ರೀ ಟಿ.ಎಸ್. ನಾಗರಾಜ
ಉಪಾಧ್ಯಾಯರವರು
ರಚಿಸಿರುವ ಸಾಂದರ್ಭಿಕ ಕವನ)



ರವಿ ನೀನಲ್ಲಿ ಬಾನಲ್ಲಿ, ಕೌತುಕಮಯ ಕಡಲಲ್ಲಿ !
ನೀನಿಲ್ಲಿ, ಭುವಿಯಲ್ಲಿ, ಜಲರಾಶಿಯಲ್ಲಿ,
ಚೆಲುವಿನ ಸ್ವರ್ಗದಲ್ಲಿ

ಬರುತಿರುವೆ ಸರಸಿಯೊಡನೆ ಸರಸವಾಡಲು,
ರಶ್ಮಿಯ ಜಳಕದಿಂ ಪುಳಕ ಮಾಡಲು,
ಸರಸಿಗೆ ವಜ್ರದ ಸರ ಹಾಕಲು !

ನೀನೇರುವ ಪೂರ್ವಾಚಲದ ಗದ್ದುಗೆ,
ಸಂಜೆಯಲಿ ರಂಗೇರುವ ಪಡಲಪ್ಪುಗೆ ಎನಿತು ಸುಂದರ !
ಹೌದು – ನೀನಿಲ್ಲದಿಯ ರಾತ್ರಿ ಬರೇ ಸಪ್ಪಗೆ

ಮೂಡಣ ರಂಗಸ್ಥಳದಲ್ಲಿ ನಿನ್ನ ಹುಟ್ಟು, ಏನಿದರ ಗುಟ್ಟು?
ಉದಯಕಾಲದ ತಿಳಿವ ಹಕ್ಕಿಗಳೂ ಇರಲಾರವು ನಿನ್ನ ಬಿಟ್ಟು

ನಮ್ಮ ನೆತ್ತಿಯ ಮೇಲೇರಿ ಸೃಷ್ಟಿಸುವೆ ರಜತ ವೇದಿಕೆ,
ಮತ್ತೆ ರಂಗೇರಿ ಮುಳುಗಿದ ಸಂಜೆಯಲಿ
ವಾರಿಗೆ ಹೊದಿಸುವೆ ಹೊನ್ನಿನ ಹೊದಿಕೆ

ನಿನ್ನ ಮುಗಿಲ ಸ್ಪರ್ಶದಿಂ ಮೂಡುವುದು,
ಕಂಗೊಳಿಸುವುದು ಕಾಮನ ಬಿಲ್ಲೆಂಬ ಸೋಜಿಗ !
ನೀನಿಲ್ಲದಿರೆ ಇರುವುದೇ ಈ ಜಗ?

ಉತ್ತರಾಯಣದಿ ಬರುವ ಮಕರ ಸಂಕ್ರಾಂತಿ,
ನಿತ್ಯ ಕರುಣಿಸು ಶಾಂತಿ ಬೇವು ಬೆಲ್ಲವ ಮೆದ್ದು,
ಎಳ್ಳು ಬೆಲ್ಲವ ತಿಂದು ಸಾಮರಸ್ಯದಿ ಪಡೆವ ವಿಶ್ರಾಂತಿ

ನಾವು ಹುಲು ಮನುಜರು ಸಹಜ,
ಸೋಮಾರಿ ಹೆಸರು ಕ್ಲಿಪ್ತ ಸಮಯದಿ
ಬರುವ ನೀನೇ ನಮ್ಮ ಪ್ರತ್ಯಕ್ಷ ದೇವರು

ಹೇ ಆದಿದೇವನೇ, ಭಾನು ಭಾಸ್ಕರನೇ,
ನಿತ್ಯ ಸಂಪದ ತರುತಿರು ನಿತ್ಯ ಮಂಗಳ ನಿನಗೆ,
ಸತ್ಯ ನಮನದಿ ಕೇಳ್ವೆ ಭುವಿಯ ರಕ್ಷಿಸುತಿರು

# ಯುವ ವಿಭಾಗದಿಂದ 'ಕೃಷ್ಣ ಸಂಧಾನ' ತಾಳಮದ್ದಳೆ

ಆಧುನಿಕ ಕಲೆಗಳ ಭರಾಟೆಯಲ್ಲಿ ಪರಂಪರಾಗತ ಜನಪದ ಕಲೆಯಾದ ಯಕ್ಷಗಾನ ತಾಳಮದ್ದಳೆ ಕ್ಷೀಣಿಸುತ್ತಾ ಇದೆ ಅನ್ನುವ ಒಂದು ಆತಂಕದ ವಾತಾವರಣ ಸೃಷ್ಟಿಯಾಗಿದೆ. ಮಾನವನ ಜೀವನವಿಧಾನವನ್ನು ಪ್ರತಿಬಿಂಬಿಸುವ, ಸಂಸ್ಕೃತಿಯನ್ನು ಪೋಷಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವ ಅನಿವಾರ್ಯತೆಯು ನಮ್ಮದಾಗಿದೆ. ಕರಾವಳಿಯ ಗಂಡು ಕಲೆಯೆಂದೇ ಕರೆಸಿಕೊಳ್ಳುವ ಈ ಆಕರ್ಷಕ ಕಲೆಯನ್ನು ಯಕ್ಷಗಾನದ ವಿವಿದ ಅಯಾಮವನ್ನು ಸಮಕಾಲೀನ ಸಂದರ್ಭದಲ್ಲಿ ಚಿಂತನೆಗೆ ಹಚ್ಚುವ ಹಾಗೂ ಈ ಕಲೆಯನ್ನು ಕರಾವಳಿ, ಮಲೆನಾಡು ದಾಟಿ ಬಯಲುಸೀಮೆ ಪ್ರದೇಶದಲ್ಲಿ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸುವ



ನಿಟ್ಟಿನಲ್ಲಿ ನಾವುಗಳು ಕಾರ್ಯೋನ್ಮುಖರಾಗಬೇಕು

ಯಕ್ಷಗಾನದ ಇನ್ನೊಂದು ಪ್ರಮುಖ ವಿಭಾಗವವೇ "ತಾಳಮದ್ದಳೆ". ಬಯಲಾಟಗಳಿಗಿಂತ ಇವು ವಿಭಿನ್ನವಾದವುಗಳು. ಇಲ್ಲಿ ವೇಷಭೂಷಣ, ನೃತ್ಯ ಮತ್ತು ಭಾವಾಭಿನಯಗಳು ಕಂಡು ಬರುವುದಿಲ್ಲ. ಭಾಗವತಿಕೆ, ಹಿಮ್ಮೇಳ ಹಾಗೂ ಮಾತುಗಾರಿಕೆಗಳು ಮಾತ್ರ ಇಲ್ಲಿರುತ್ತವೆ. ಬಯಲಾಟದಂತೆ ಇಲ್ಲಿಯೂ ಒಂದು ಪ್ರಸಂಗವನ್ನು ಆಯ್ದುಕೊಳ್ಳಲಾಗುತ್ತದೆ.

ಭಾಗವತರು ಹಾಡುಗಾರಿಕೆಯ ಮೂಲಕ ಕಥೆಯನ್ನು ಹೇಳುತ್ತಾ ಹೋಗುತ್ತಾರೆ. ಇಲ್ಲಿ ಪಾತ್ರಧಾರಿಗಳ ಬದಲು ಅರ್ಥಧಾರಿಗಳಿರುತ್ತಾರೆ. ಅರ್ಥಧಾರಿಗಳು ಹಾಡುಗಾರಿಕೆ ಯಲ್ಲಿ ಇರುವ ಕಥೆಯ ಭಾಗವನ್ನು ಮಾತುಗಾರಿಕೆಯ ಮೂಲಕ ಚರ್ಚಿಸುತ್ತಾರೆ. ಬಯಲಾಟಕ್ಕೂ ತಾಳ ಮದ್ದಳೆಗೂ ಪ್ರಮುಖ ವ್ಯತ್ಯಾಸವಿರುವುದೇ ಈ ಮಾತುಗಾರಿಕೆಯಲ್ಲಿ.

**– ಬಿ.ಎಸ್. ಬಾಲಚಂದ್ರ ತೋಳ್ಪಾಡಿ**



ಇಂತಹದ್ದೇ ಒಂದು ಪ್ರಯತ್ನ ನಮ್ಮ 'ಆನಂದ ಬಳಗದ' ಯುವ ವಿಭಾಗದ ವತಿಯಿಂದ ಬೆಂಗಳೂರಿನಲ್ಲಿ ನಡೆಯಿತು.

ಬಳಗದ ಸದಸ್ಯರು ತಮ್ಮ ಚೊಚ್ಚಲ ಪ್ರಯತ್ನದಲ್ಲೇ "ಶ್ರೀ ಕೃಷ್ಣ ಸಂಧಾನ" ಎಂಬ ಪುಣ್ಯ ಕಥಾಭಾಗವನ್ನು ಅತ್ಯಂತ ಯಶಸ್ವಿ ಯಾಗಿ ಆಯೋಜಿಸಿ ತಾವು ಯಾವುದೇ ವೃತ್ತಿಪರ ಕಲಾವಿದರಿಗೆ ಸರಿಸಾಟಿಯಾಗ ಬಲ್ಲೆವು ಎಂದು ತೋರಿಸಿ ಕೊಟ್ಟರು. ಶ್ರೀ ಕೃಷ್ಣ ಸಂಧಾನ ಪ್ರಸಂಗವು ಸಾರ್ವಕಾಲಿಕ ಮೌಲ್ಯವುಳ್ಳ ವಾಗಿದ್ದು ಸಮಕಾಲೀನ ಸಮಾಜಕ್ಕೆ ಅತ್ಯಂತ ಉಪಯುಕ್ತವಾಗಿರುವುದನ್ನು ಗಮನಿಸಿ ಈ ಪ್ರಸಂಗವನ್ನು ಆಯ್ಕೆ ಮಾಡಿಕೊಂಡಿರುವುದು ಬಳಗಕ್ಕೆ ಹೆಮ್ಮೆಯ ವಿಷಯ.

ಯಕ್ಷಗಾನ ತಾಳಮದ್ದಳೆ ಪ್ರಸಂಗಗಳು ಒಳ್ಳೆಯ ಮತ್ತು ಕೆಟ್ಟ ಮೌಲ್ಯಗಳ ಸಂಘರ್ಷವನ್ನು ಚಿತ್ರಿಸುತ್ತವೆ. ಅಂತಿಮವಾಗಿ ಕೆಟ್ಟ ಮೌಲ್ಯಗಳು ಒಳ್ಳೆಯ ಮೌಲ್ಯಗಳಿಂದ ಸೋಲು ಅನುಭವಿಸುತ್ತವೆ. ಒಳ್ಳೆಯ ಮೌಲ್ಯಗಳನ್ನು ದೇವತೆಗಳು ಅಥವಾ ಋಷಿ ಮುನಿಗಳು ಹಾಗೂ ಕೆಟ್ಟ ಮೌಲ್ಯಗಳನ್ನು ರಾಕ್ಷಸಗುಣದ ಪಾತ್ರಗಳಿಂದ ಸಂಕೇತಿಸಲಾಗುತ್ತದೆ. ತಾಳಮದ್ದಳೆಯ ಬಹುತೇಕ ಪ್ರಸಂಗಗಳು ಸುಖಾಂತ್ಯಗೊಳ್ಳುತ್ತವೆ.

ಯಾವುದೇ ಯಕ್ಷಗಾನ ತಾಳಮದ್ದಳೆ ಯಶಸ್ವಿಯಾಗಿ ನಡೆಯಬೇಕಾದರೆ ಹಿಮ್ಮೇಳವು ಪ್ರಮುಖ ಪಾತ್ರ ವಹಿಸುತ್ತದೆ.

ತಾಳಮದ್ದಳೆ ಪ್ರದರ್ಶನದ ಕೇಂದ್ರ ವ್ಯಕ್ತಿ ಭಾಗವತರು. ಶ್ರೀ ವಿಷ್ಣು ಪ್ರಸಾದ್ ಕಲ್ಲೂರಾಯರು ಯಕ್ಷಗಾನ ತಾಳಮದ್ದಳೆ ಸಾಹಿತ್ಯವನ್ನು ಪದ್ಯ, ತಾಳ, ರಾಗ, ಲಯ ಮತ್ತು ಭಾವ ಬದ್ಧವಾಗಿ ಹಾಡಿ ಅದ್ಭುತ ಪ್ರದರ್ಶನಕ್ಕೆ ಪ್ರಧಾನ ಕಾರಣರಾದರು.

ಅವನ ಸ್ವರ ಸುಶ್ರಾವ್ಯವಾಗಿದ್ದು ಸ್ಪಷ್ಟವಾಗಿ ಕೇಳಿಸುವಂತಿತ್ತು. ಕುಂಟಿನಿರವರ ಮದ್ದಳೆಯ ಕೈಚಳಕ ಅಮೋಘವಾಗಿತ್ತು. ಶ್ರೀ ಜಯಪ್ರಕಾಶ್ ರವರ ಚೆಂಡೆಯ ನಾದ ಶ್ರೀ ಗೋಪಾಲಕೃಷ್ಣ ಕುಂಜತ್ತಾಯರ ಚಕ್ರತಾಳ ಕಥೆಗೆ ಪೂರಕವಾಗಿತ್ತು.

"ಶ್ರೀ ಕೃಷ್ಣ ಸಂಧಾನ" ಕಥಾನಕದಲ್ಲಿ, ಶ್ರೀಕೃಷ್ಣನಾಗಿ ಪ್ರೊ. ಕೆ.ಇ. ರಾಧಾಕೃಷ್ಣ ಅವರು ತಾಳಮದ್ದಳೆ ಕ್ಷೇತ್ರದಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಅರ್ಥಗಾರಿಕೆ ಮೂಲಕ ಒಳ್ಳೆಯ ಕಲಾವಿದರೆಂದೆನಿಸಿಕೊಂಡವರು. ಪಾತ್ರಕ್ಕೆ ಅನುಗುಣವಾಗಿ, ತನ್ನ ವಿರೋಧಿ ಎಷ್ಟೇ ಪ್ರಚೋದಿಸಿದರೂ ಧೃತಿಗೆಡದೆ, ಆದರೆ ಪಾತ್ರಕ್ಕೆ ಸ್ವಲ್ಪವೂ ಚ್ಯುತಿ ಬಾರದೆ ಶಾಂತರೀತಿಯಲ್ಲಿ ಸಮರ್ಥವಾಗಿ ನಿಭಾಯಿಸುವ ಅವರ ಪ್ರತಿಭೆ ನಿಜಕ್ಕೂ ಅನುಕರಣೀಯ.

ಇನ್ನು ಕೌರವನಾಗಿ ಅರ್ಥಗಾರಿಕೆಯಲ್ಲಿ ನಮ್ಮನ್ನೆಲ್ಲ ಮಂತ್ರಮುಗ್ಧಗೊಳಿಸಿದ್ದ ಬಳಗದ ಇನ್ನೊಂದು ಪ್ರತಿಭೆಯೇ ಶ್ರೀ ಮಟ್ಟಿ ರಾಮಚಂದ್ರ ರಾವ್. ಬಳಗದಲ್ಲಿ ಇಂತಹ ಪ್ರತಿಭೆಗಳಿವೆಯೇ ಎಂದು ಒಂದು ಸಲ ಯೋಚನೆ ಮಾಡುವಷ್ಟರಮಟ್ಟಿಗೆ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದವರು. ತಾಳಮದ್ದಳೆಯಲ್ಲಿ ವೈಚಾರಿಕತೆ ಮತ್ತು ಭಾವನೆಗಳು ಎರಡಕ್ಕೂ ಪ್ರಾಮುಖ್ಯತೆ ಕೊಟ್ಟು ತಾನು ಯಾವುದೇ ವೃತ್ತಿಪರ ಕಲಾವಿದರಿಗೆ ಕಡಿಮೆಯೇನಿಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಬಳಗದಲ್ಲಿ ರಾಮಣ್ಣ ಎಂದೇ ಖ್ಯಾತಿಯ ಇವರು ವೃತ್ತಿಯಲ್ಲಿ ಛಾಯಾಚಿತ್ರಗಾರರು. ಪ್ರವೃತ್ತಿಯಲ್ಲಿ ಇವರು ಸಕಲಕಲಾವಲ್ಲಭರು. ಅರ್ಥಗಾರಿಕೆಯಲ್ಲಿ ಇವರ ಪಾಂಡಿತ್ಯ ಅಪಾರವಾದದ್ದು.

ವಿದುರನ ಪಾತ್ರಧಾರಿಯಾಗಿ ಶ್ರೀ ಎಂ.ಕೆ. ಗುರುಮೂರ್ತಿಯವರ ಅರ್ಥಪೂರ್ಣ ಅಭಿನಯ, ತಾಳಮದ್ದಳೆ ಪ್ರಿಯರ ಮನಸ್ಸೂರೆಗೊಂಡಿತು. ತಮ್ಮ ಚೊಚ್ಚಲ ಪ್ರಯತ್ನದಲ್ಲೇ ಅವರ ಆತ್ಮವಿಶ್ವಾಸ, ನಿರರ್ಗಳವಾದ ಅರ್ಥಗಾರಿಕೆ, ತಾನು ಯಾರಿಗೂ ಕಡಿಮೆಯೇನಲ್ಲ ಅನ್ನುವ ಹಾಗೆ ಇತ್ತು. ಪ್ರಸಂಗದ ಉತ್ತರಾರ್ಧದಲ್ಲಿ ಕೌರವನು ಅವಮಾನಿಸಿದಾಗ ವಿದುರನು ಕೋಪಗೊಂಡು ಕೌರವನ ಜನ್ಮ ಜಾಲಾಡಿದ ರೀತಿ ಅತ್ಯಂತ ಪ್ರಶಂಸನೀಯ. ಯಕ್ಷಗಾನದ ಮೇಲಣ ಅಪಾರ ಪ್ರೀತಿ, ಶ್ರದ್ಧೆ ಮತ್ತು ತಿಳಿದುಕೊಳ್ಳಬೇಕೆನ್ನುವ ತುಡಿತವೇ ಇವರ ಈ ಯಶಸ್ಸಿಗೆ ಕಾರಣ.

ಯುದಿಷ್ಠಿರನಾಗಿ ಶ್ರೀ ಗೋಪಾಲಕೃಷ್ಣ ಅವರು ತಮ್ಮ ಪಾತ್ರಕ್ಕೆ ಕೊಂಚವೂ ಚ್ಯುತಿ ಬರದ ಹಾಗೆ ಸಮರ್ಪಕವಾಗಿ ನಿರ್ವಹಿದರು.


ತಾಳಮದ್ದಳೆ ಕಾರ್ಯಕ್ರಮವು ಪದ್ಮನಾಭನಗರ ದಲ್ಲಿರುವ ರಾಜೀವ್ ಸ್ಟುಡಿಯೋದಲ್ಲಿ ಚಿತ್ರೀಕರಣಗೊಂಡು ಬಳಗದ ಸದಸ್ಯರಿಗೆ ವಾಟ್ಸಾಪ್ ಗ್ರೂಪ್ ಮುಖಾಂತರ ಯೂಟ್ಯೂಬ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು. ಕಾರ್ಯಕ್ರಮವನ್ನು ಬಳಗದ ಸದಸ್ಯೆ ಹಾಗೂ ಸ್ವಯಂ ಯಕ್ಷಗಾನ ಕಲಾವಿದೆ ಶ್ರೀಮತಿ ಸುಜಾತಾ ರಮೇಶ್ ಅವರು ಸಮರ್ಥವಾಗಿ ನಿರೂಪಿಸಿದರು.

ಆನಂದ ಬಳಗದ ಸದಸ್ಯರಿಗೋಸ್ಕರ ಒಂದು ಯಕ್ಷಗಾನ ತಾಳ ಮದ್ದಳೆ ನಡೆಸಬೇಕೆಂಬ ಶ್ರೀ ಗೋಪಾಲಕೃಷ್ಣ ಕುಂಜತ್ತಾಯರ ಆಕಾಂಕ್ಷೆ, ಹಂಬಲ, ಕನಸು ಹಾಗು ಪ್ರಯತ್ನ ಫಲಕಾರಿಯಾಯಿತು. ಅವರ ಮುಂದಾಳತ್ವದಲ್ಲಿ ಆನಂದ ಬಳಗ ಯುವ ವಿಭಾಗವು ಹಮ್ಮಿಕೊಂಡ ಈ ಕಾರ್ಯಕ್ರಮವು ಯಶಸ್ವಿಯಾಗಿ ಪ್ರದರ್ಶನಗೊಂಡು ಬಳಗದ ಎಲ್ಲಾ ಯಕ್ಷಗಾನ ತಾಳಮದ್ದಳೆ ಪ್ರಿಯರ ಮೆಚ್ಚುಗೆ ಗಳಿಸಿತು.

ಇನ್ನೂ ಇಂತಹ ತಾಳಮದ್ದಳೆ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಬರಲಿ, ಬಳಗದ ಪ್ರತಿಭಾವಂತ ಹಾಗೂ ನುರಿತ ಮಹಿಳೆಯರಿಂದಲೂ ತಾಳಮದ್ದಳೆ ಕಾರ್ಯಕ್ರಮಗಳು ನೆರವೇರಲಿ ಎಂದು ಆನಂದ ಬಳಗದ ಸದಸ್ಯರೆಲ್ಲರ ಮನದಾಳದ ಬಯಕೆ.

## ಬಹುಮಾನಿತ ಕವನ

ಕುಮಾರ ಪುರ ಪ್ರಕಾಶನ ಕಡಬ ಇವರು ಇತ್ತೀಚೆಗೆ ಆಯೋಜಿಸಿದ 2020–21ನೇ ಸಾಲಿನ 'ನಾನು ನನ್ನ ಗೀಚು' ರಾಜ್ಯಮಟ್ಟದ ಹನಿಗವನ/ಚುಟುಕು ಸ್ಪರ್ಧೆಯಲ್ಲಿ ಬಂದಿರುವ 1397 ಕವನಗಳಲ್ಲಿ 72 ಕವನಗಳು ಅತ್ಯತ್ತಮವೆಂದು ಆಯ್ಕೆಯಾಗಿದ್ದು ಬಳಗದ ಬಹುಮುಖ ಪ್ರತಿಭಾವಂತೆ ಶ್ರೀಮತಿ ಸುಜಾತ ರಮೇಶ್‌ರವರ ಈ ಕೆಳಗಿನ ಕವನವೂ ಸೇರಿರುವುದು ಹೆಮ್ಮೆಯ ಸಂಗತಿ :



### ಜೀವನ

ಮುಗ್ಧವಾಗಿತ್ತು ಬಾಲ್ಯ
ಮಿಂಚಾಗಿತ್ತು ಯೌವನ
ರಂಗೇರಿತ್ತು ಬದುಕು
ಪಕ್ಕನೆ ಬಂದೆರಗಿತ್ತು ಮುಪ್ಪು
ಮುಗಿದಿತ್ತು ಜೀವನ !!

# ಬಳಗದಿಂದ ಪ್ರತಿಭಾ ಪುರಸ್ಕಾರ

ಆನಂದ ಬಳಗವು ಪ್ರತಿ ವರ್ಷವೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಅಂತಿಮ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಬಳಗದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸುತ್ತಾ ಬಂದಿದೆ. ಕಳೆದ ಕೆಲವಾರು ವರ್ಷಗಳಿಂದ ಭೀಮಾ ಫೌಂಡೇಶನ್‌ನವರು ಪ್ರಾಯೋಜಿಸುತ್ತಿರುವ ಪ್ರತಿಭಾ ಪುರಸ್ಕಾರಕ್ಕಾಗಿ ಬಳಗದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಭೃಗುವಾಣಿಯಲ್ಲಿ ಆಹ್ವಾನಿಸಲಾಗಿತ್ತು. ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ಸಕಾಲದಲ್ಲಿ ಬಂದಿದ್ದರೂ, ಕೋವಿಡ್–19ರ ಮಾರ್ಗಸೂಚಿಯ ಹಿನ್ನಲೆಯಲ್ಲಿ ಸಾಂಸ್ಕೃತಿಕ ವಿಭಾಗವು ಪ್ರತಿ ವರ್ಷ ನಡೆಸುವ ಪ್ರತಿಭಾಮೇಳವನ್ನು ಈ ವರ್ಷ ಹಮ್ಮಿಕೊಳ್ಳಲಾಗದೆ, ಪ್ರತಿಭಾ ಪುರಸ್ಕಾರವನ್ನು ತುಸು ಮುಂದೂಡುವುದು ಅನಿವಾರ್ಯವಾಯಿತು.

ಕೋವಿಡ್ ವಿಷಮ ಪರಿಸ್ಥಿತಿ ತಿಳಿಯಾಗದ ಕಾರಣ ದಿ.12.12.2020ರಂದು ಹೋಟೆಲ್ ಅಜಂತಾದಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಪ್ರತಿಭಾ ಪುರಸ್ಕಾರದ ನಗದು ಬಹುಮಾನವನ್ನು ಪ್ರಾಯೋಜಿಸಿದ ಭೀಮಾ ಜ್ಯುವೆಲ್ಲರ್ಸ್‌ನ ಮಾಲೀಕರಾದ ಶ್ರೀ ವಿಷ್ಣು ಶರಣ್ ಕೆ. ಭಟ್‌ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, ಅಭಿನಂದಿಸಿದರು. ಬಳಗದ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಭಟ್ ಸೇರಿದಂತೆ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಪ್ರತಿಭಾನ್ವಿತ ವಿದ್ಯಾರ್ಥಿಗಳ ವಿವರಗಳನ್ನು ಡಾ. (ಶ್ರೀಮತಿ) ವೀಣಾಶರತ್‌ರವರು ನೀಡಿದರು.

## 2020ನೇ ಸಾಲಿನ ಪ್ರತಿಭಾ ಪುರಸ್ಕೃತರ ವಿವರ ಇಂತಿದೆ :

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ಹೆತ್ತವರ ಹೆಸರು | ಪಡೆದ ಶೇಕಡಾ ಅಂಕ |
|---|---|---|---|
| I. ಎಸ್.ಎಸ್.ಎಲ್.ಸಿ. / 10ನೇ ತರಗತಿ | | | |
| 1. | ಪ್ರಣವ ಉಪಾಧ್ಯಾಯ .ವಿ | ವಿನಾಯಕ ಪ್ರಸಾದ್ ಮತ್ತು ಭಾನುಮತಿ | 91.32 |
| 2. | ಎಸ್. ಮೈತ್ರಿ | ಕೆ.ವಿ. ಶ್ರೀಕಾಂತ್ ಭಟ್ | 92.32 |
| 3. | ಸರ್ವಜಿತ್ ಎ.ಎಸ್. | ಶ್ರೀಕಾಂತ | 92.40 |
| 4. | ಸಮರ್ಥ್ ಭಟ್ .ವೈ | ವೈ. ಸುನಿಲ್ ಮತ್ತು ಸವಿತಾ | 92.60 |
| 5. | ಸನ್ಮಯ್ ಕೃಷ್ಣಾಪುರ | ಸಂದೀಪ್ ಕೃಷ್ಣಾಪುರ ಮತ್ತು ಮಧುರ | 92.80 |
| 6. | ಪ್ರೇರಣಾ ಜಿ | ಗುರುಪ್ರಸಾದ್ .ಎಸ್ ಮತ್ತು ವಾಣಿ | 94.08 |
| 7. | ಪ್ರಾರ್ಥನಾ ಆರ್ ಕಾರಂತ್ | ರಮೇಶ್ ಕಾರಂತ್ ಮತ್ತು ಸೀಮಾ | 94.24 |
| 8. | ಪ್ರಣವ್ .ಎಸ್ ಆಚಾರ್ಯ | ಜಿ.ವಿ. ಶ್ರೀಶ ಆಚಾರ್ಯ ಮತ್ತು ಶೀಲಾ | 96.50 |
| 9. | ಮಾನ್ಯ ಆರ್. ಪಾವಂಜೆ | ರಾಜೇಂದ್ರ ಪಾವಂಜೆ ಮತ್ತು ಪ್ರಿಯಾ | 97.12 |
| 10. | ಶರಧಿ .ವಿ | ವೇಣುಗೋಪಾಲ್ ಎಂ. ಮತ್ತು ಜ್ಯೋತಿ | 97.76 |
| 11. | ಎಸ್. ಶ್ರೀವತ್ಸ | ವಿ. ಶ್ರೀಪತಿ | 99.36 |
| 12. | ಶಾಶ್ವತ್ ಆರ್. ಕೆದಿಲಾಯ | ರಾಜೇಶ್ ಮತ್ತು ಲಕ್ಷ್ಮಿ | 99.68 |
| 13. | ಶಾರ್ವರಿ ವಿ. ಪೆಜತ್ತಾಯ | ವಾದಿರಾಜ ಪೆಜತ್ತಾಯ ಮತ್ತು ಸಹನಾ | 99.68 |
| 14. | ಸ್ಫೂರ್ತಿ ವೈ. ಅಗ್ನಿಹೋತ್ರಿ | ಯೋಗೀಶ್ ಅಗ್ನಿಹೋತ್ರಿ | 99.84 |
| 15. | ತುಳಸಿ ಜಿ. ರಾಯಸ | ಗುರುಪ್ರಕಾಶ್ ರಾಯಸ ಮತ್ತು ಸರಿತಾ | 99.84 |

| II. ಪಿ.ಯು.ಸಿ. / 12ನೇ ತರಗತಿ – ವಿಜ್ಞಾನ | | | |
|---|---|---|---|
| 1. | ಅನೀಶ್ ಎಂ. ಬೈಲ್ | ಮುರಳೀಧರ ಬೈಲ್ ಮತ್ತು ವೈಶಾಲಿ | 90.17 |
| 2. | ಕೆ. ಸುಜನ್‌ರಾವ್ | ಕೆ. ಸುಪ್ರೀತ್ ಮತ್ತು ರಾಜೇಶ್ವರಿ | 92.67 |
| 3. | ಋತು ಆರ್. | ರಾಜೆಂದ್ರ ಪುತ್ತೂರಾಯ .ಎ | 93.50 |
| 4. | ಅದ್ಯಪಾಡಿ ಸೂರಜ್ | ನಾಗರಾಜ ಮತ್ತು ಜ್ಯೋತಿ | 94.33 |
| 5. | ಸೃಜನ್ ಎಸ್. ಭಟ್ | ಸುಬ್ರಹ್ಮಣ್ಯ ಭಟ್ ಮತ್ತು ಶುಭಲಕ್ಷ್ಮಿ | 95.67 |
| 6. | ಅಂಜನಾ ರಾವ್ | ಮುರಳೀಧರ ಬೈಲ್ ಮತ್ತು ವೈಶಾಲಿ | 96.50 |
| 7. | ಪ್ರತೀಕ್ ಆಚಾರ್ಯ ಬಿ. | ಪ್ರವೀಣ್ ಆಚಾರ್ಯ ಮತ್ತು ನಮಿತಾ | 96.67 |
| 8. | ನಿಧಿ ಕುಬಣೂರು | ನವೀನ್ ಚಂದ್ರ ಕುಬಣೂರು | 97.50 |
| 9. | ಶ್ರೀಹರಿ ಅಡಿಗ ಬಿ.ಎಸ್. | ಶ್ರೀಪಾದ ಅಡಿಗ ಮತ್ತು ಭವಾನಿ | 97.83 |
| 10. | ಅರ್ಪಿತಾ ಹತ್ವಾರ್ ಟಿ.ಜಿ. | ಟಿ.ವಿ. ಗುರುರಾಜ ಮತ್ತು ಕಲ್ಪನಾ | 98.33 |
| III. ಪಿ.ಯು.ಸಿ. / 12ನೇ ತರಗತಿ – ವಾಣಿಜ್ಯ | | | |
| 1. | ಮಹಿಮಾ ವಿ. ಹತ್ವಾರ್ | ಟಿ.ಎಸ್. ವೆಂಕಟೇಶ್ ಹತ್ವಾರ್ ಮತ್ತು ಜಯಮಾಲ | 92.83 |
| 2. | ಗುರುನರಸಿಂಹ ಆಚಾರ್ಯ | ಅನಂತಕೃಷ್ಣ ಆಚಾರ್ಯ ಮತ್ತು ವಿನುತಾ | 93.00 |
| 3. | ದೀಪಿಕಾ ಎಂ. | ಮಂಜುನಾಥ ಸಿ ಮತ್ತು ಲತಾ | 96.17 |
| 4. | ಅನುಷಾ ಎಸ್. ರಾವ್ | ಕೆ. ಸತೀಶ್‌ರಾವ್ ಮತ್ತು ಗುಣವತಿ | 96.50 |





✧✧✧✧✧✧ **ಬಳಗಕ್ಕೆ ಹೆಮ್ಮೆ ತಂದಿರುವ ಪ್ರತಿಭೆಗಳಿಗೆ ಹಾರ್ದಿಕ ಅಭಿನಂದನೆಗಳು** ✧✧✧✧✧✧

## ಹೊಸತಂತ್ರ

ಒಂದು ಸ್ಥಳದಲ್ಲಿ ಪೋಲೀಸರು ಒಂದು ಫಲಕವನ್ನು ಸ್ಥಾಪಿಸಿದರು

'ನೋ ಪಾರ್ಕಿಂಗ್ ಜೋನ್ ಪೆನಾಲ್ಟಿ 250 ರೂಪಾಯಿಗಳು (No Parking Zone. Penalty Rs.250)

ಪ್ರಸ್ತುತ ಆಜ್ಞೆಯನ್ನು ಯಾರೂ ಕೂಡ ಪಾಲನೆ ಮಾಡುತ್ತಿರಲಿಲ್ಲ. ಜನರು ಫಲಕದ ಕೆಳಗಡೆಯೇ ವಾಹನಗಳನ್ನು ನಿಲ್ಲಿಸುತ್ತಿದ್ದರು.

ಕೆಲವು ದಿನಗಳ ನಂತರ ಅಧ್ಯಾಪಕರೊಬ್ಬರು ಆ ದಾರಿಯ ಮೂಲಕ ಹಾದುಹೋಗುತ್ತಿದ್ದರು. ಅವರು ಆ ಫಲಕ ಮತ್ತು ಪರಿಸರವನ್ನು ಸೂಕ್ಷ್ಮವಾಗಿ ವೀಕ್ಷಿಸಿದ ಬಳಿಕ ಫಲಕದಲ್ಲಿ ಸಣ್ಣ ಬದಲಾವಣೆಯನ್ನು ಮಾಡಿದರು.

ಫಲಕದಿಂದ "ನೋ" ಮತ್ತು "ಪೆನಾಲ್ಟಿ" ಇವೆರಡನ್ನು ಉಜ್ಜಿ ತೆಗೆದರು. ಈಗ ಅದು ಹೀಗಾಯಿತು : "ಪಾರ್ಕಿಂಗ್ ಜೋನ್ 250 ರೂಪಾಯಿಗಳು."

ಆ ನಂತರ ಅಲ್ಲಿ ಯಾರೂ ಕೂಡ ವಾಹನಗಳನ್ನು ನಿಲ್ಲಿಸುತ್ತಿರಲಿಲ್ಲ !!!

ಪೋಲೀಸರು ಈಗ ಆ ಅಧ್ಯಾಪಕರನ್ನು ಹುಡುಕುತ್ತಿದ್ದಾರೆ, ಅವರಿಂದ ಹೆಚ್ಚು ತಂತ್ರ (trick)ಗಳನ್ನು ಕಲಿಯುವುದಕ್ಕಾಗಿ.....

ಶಿಕ್ಷೆಯಿಂದ ಎಲ್ಲರನ್ನೂ ಸರಿದಾರಿಗೆ ತರಲು ಸಾಧ್ಯವಿಲ್ಲ. ಇದನ್ನು ಸರಿಯಾಗಿ ಬಲ್ಲವರು ನಿಜವಾದ ಅಧ್ಯಾಪಕರಾಗುತ್ತಾರೆ. ಇಲ್ಲಿ ಆಗಿದ್ದೂ ಕೂಡ ಅದೇ.

(ಸಂಗ್ರಹ)

# ಪೇಜಾವರ ಶ್ರೀಗಳ ಮಹಾರಾಧನೋತ್ಸವ



ಉಡುಪಿಯ ಶ್ರೀ ಪೇಜಾವರ ಮಠಾಧೀಶರಾಗಿದ್ದ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ದಿ. 29.12.2019 ರಂದು ಹರಿಪಾದವನ್ನು ಸೇರಿದ್ದು ಪೂಜ್ಯ ಶ್ರೀಗಳ ಪ್ರಥಮ ಮಹಾಸಮಾರಾಧನೋತ್ಸವ 2020ರ ದಶಂಬರ 10 ರಿಂದ 18ರವರೆಗೆ ವಿಧ್ಯುಕ್ತವಾಗಿ ಹಾಗೂ ಭಕ್ತಿ ಮತ್ತು ಶ್ರದ್ಧೆಯಿಂದ ನಡೆದಿರುತ್ತದೆ. ಯತಿಕುಲ ತಿಲಕ ಎಂಬ ಮನ್ನಣೆಗೆ ಪಾತ್ರರಾಗಿದ್ದ ವಿಶ್ವೇಶತೀರ್ಥರ ಇಚ್ಛೆಯಂತೆ ಅವರ ವೃಂದಾವನವನ್ನು ಶ್ರೀಗಳ ಅಚ್ಚುಮೆಚ್ಚಿನ ಕರ್ಮಭೂಮಿ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಸ್ಥಾಪಿಸಲಾಗಿದೆ. ಶ್ರೀಗಳ ಶಿಲಾ ವೃಂದಾವನದ ಪಕ್ಕದಲ್ಲೇ ಅವರ ಗುರುಗಳಾದ ವಿದ್ಯಾಮಾನ್ಯ ತೀರ್ಥರ ಮೃತ್ತಿಕಾ ವೃಂದಾವನವನ್ನೂ ಸ್ಥಾಪಿಸಲಾಗಿದ್ದು. ಈ ಉಭಯ ಶ್ರೀಗಳ ವೃಂದಾವನ ಭಕ್ತ ಸಮೂಹಕ್ಕೆ ಪವಿತ್ರ ಹಾಗೂ ಪೂಜ್ಯನೀಯ ತಾಣವಾಗಲಿದೆ.

ಪ್ರಥಮ ಆರಾಧನಾ ಮಹೋತ್ಸವ ಸಮಿತಿ ಮತ್ತು ಪೂರ್ಣಪ್ರಜ್ಞ ವಿದ್ಯಾಪೀಠದ ನೇತೃತ್ವದಲ್ಲಿ ಪೇಜಾವರ ಮಠಾಧಿಪತಿ ಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥರ ಮಾರ್ಗದರ್ಶನದಲ್ಲಿ 9 ದಿನಗಳ ಕಾಲ ನಡೆದ ಆರಾಧನೋತ್ಸವದಲ್ಲಿ ಧಾರ್ಮಿಕ ಪೂಜೆ–ಪುನಸ್ಕಾರಗಳು, ಹೋಮ ಹವನಾದಿಗಳು ಮತ್ತಿತರ ವಿಧಿ–ವಿಧಾನಗಳು ಬಹು ಸಂಖ್ಯೆಯಲ್ಲಿರುವ ಪೂಜ್ಯ ಶ್ರೀಗಳ ಶಿಷ್ಯವೃಂದದವರಿಂದ ಸಾಂಗವಾಗಿ ನಡೆದವು. ಜೊತೆಗೆ ಪ್ರತಿ ದಿನವೂ ವಿವಿಧ ಪ್ರಸಿದ್ಧ ವಿದ್ವಾಂಸರಿಂದ ಧಾರ್ಮಿಕ ಪ್ರವಚನ ಮತ್ತು ಉಪನ್ಯಾಸಗಳನ್ನೂ ಸಂಯೋಜಿಸಲಾಗಿತ್ತು. ದಿನಾಂಕ 10.12.2020 ರಂದು ಶ್ರೀ ಪುತ್ತಿಗೆ ಮಠಾಧೀಶರಾದ ಪೂಜ್ಯ ಸುಗುಣೇಂದ್ರ ತೀರ್ಥರ ಅಧ್ಯಕ್ಷತೆಯಲ್ಲಿ ನಡೆದ "ಇತಿಹಾಸ ಗೋಷ್ಠಿ"ಯಿಂದ ಆರಂಭಿಸಿ ಮಧ್ಯಮಾರಾಧನೆಯ ದಿನ ಶ್ರೀ ಪಲಿಮಾರು ಮಠಾಧೀಶ ಪೂಜ್ಯ ವಿದ್ಯಾಧೀಶ ತೀರ್ಥರ ಅಧ್ಯಕ್ಷತೆಯಲ್ಲಿ ನಡೆದ "ಉಪ ನಿಷಚ್ಚಿಂತನೆ," ಅದೇ ದಿನ ಸಂಜೆ ಶ್ರೀ ಕೃಷ್ಣಾಪುರ ಮತ್ತು ಶ್ರೀ ಸೋದೆ ಮಠಾಧೀಶರ ಅಧ್ಯಕ್ಷತೆಯಲ್ಲಿ ನೆರವೇರಿದ "ಗುರುಗುಣಸ್ತವನ"ದವರೆಗೆ ಪ್ರತಿಯೊಂದು ಉಪನ್ಯಾಸಗಳೂ ವಿಚಾರ ಪ್ರಭೋದಕವಾಗಿದ್ದವು.

ಪೂರ್ಣಪ್ರಜ್ಞ ವಿದ್ಯಾಪೀಠದ ದೇಗುಲದ ಬಲಬದಿಯಲ್ಲಿ ಅತ್ಯಂತ ಸುಂದರವಾಗಿ ಮತ್ತು ಶಾಸ್ತ್ರಪ್ರಕಾರವಾಗಿ ನಿರ್ಮಿಸಲ್ಪಟ್ಟ ವೃಂದಾವನದಲ್ಲಿ ದಿ.16.12.2020 ರಂದು ಪೇಜಾವರ ಶ್ರೀಗಳ ಪೂರ್ವಾರಾಧನೆ 17 ರಂದು ಮಧ್ಯಾರಾಧನೆ ಹಾಗೂ 18 ರಂದು ಉತ್ತರಾರಾಧನೆ ವಿಜೃಂಭಣೆಯಿಂದ ಸಂಪನ್ನವಾಯಿತು. ಅಷ್ಟಮಠದ ಪೂಜ್ಯ ಯತಿಗಳು ಇತರ ಪೀಠಾಧಿಪತಿಗಳು, ಸಾಮಾಜಿಕ ಹಾಗೂ ರಾಜಕೀಯ ಧುರೀಣರು, ಧಾರ್ಮಿಕ ಮುಖಂಡರು ಪಾಲ್ಗೊಂಡಿದ್ದ ಈ ಆರಾಧನಾ ಮಹೋತ್ಸವವನ್ನು ಕೋವಿಡ್–19ನ ಸರಕಾರದ ಮಾರ್ಗಸೂಚಿಯನ್ವಯ ಸಂಯೋಜಿಸಿದ್ದು, ಸಾರ್ವಜನಿಕರಿಗೆ ಭಾಗವಹಿಸುವ ಅವಕಾಶವಿರಲಿಲ್ಲ. ಆದರೆ ಯೂಟ್ಯೂಬ್, ಫೇಸ್‌ಬುಕ್ ಮತ್ತಿತರ ಆಧುನಿಕ ವ್ಯವಸ್ಥೆಗಳ ಮೂಲಕ ಭಕ್ತ ವೃಂದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ವೀಕ್ಷಿಸುವ ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು. ಕರೋನಾ ಮಹಾಮಾರಿಯ ಇತಿ–ಮಿತಿಯ ನಡುವೆಯೂ, ಒಂಭತ್ತು ದಿನಗಳ ಮಹಾ ಆರಾಧನಾ ಮಹೋತ್ಸವವನ್ನು ಶ್ರೀಗಳಿಗೆ ಪ್ರಿಯವಾಗುವಂತೆ ವಿಧ್ಯುಕ್ತವಾಗಿ ಹಾಗೂ ಯಶಸ್ವಿಯಾಗಿ ಸಂಯೋಜಿಸಿದ ಸರ್ವರಿಗೂ ಪೇಜಾವರ ಶ್ರೀಗಳು ಹಾಗೂ ಶ್ರೀಗಳ ಆರಾಧ್ಯ ದೇವರಾದ ಶ್ರೀಕೃಷ್ಣ ಅನುಗ್ರಹಿಸಲಿ.



## ಎಡನೀರು ನೂತನ ಮಠಾಧೀಶರ ಪೀಠಾರೋಹಣ

ಕಾಸರಗೋಡು ಜಿಲ್ಲೆಯ ಶ್ರೀ ಎಡನೀರು ಮಠದಲ್ಲಿ ದೀರ್ಘಕಾಲ ಮಠಾಧೀಶರಾಗಿದ್ದ ಪೂಜ್ಯ ಶ್ರೀ ಕೇಶವಾನಂದ ಭಾರತಿ ಶ್ರೀಗಳು ಹರಿಪಾದವನ್ನು ಸೇರಿದ ನಂತರ, ಈ ಮಠದ ನೂತನ ಪೀಠಾಧಿಪತಿಗಳಾಗಿ ಪೂಜ್ಯ ಶ್ರೀ ಸಚ್ಚಿದಾನಂದ ಭಾರತಿ ಶ್ರೀ ಪಾದಂಗಳವರ ಪೀಠಾರೋಹಣವು ವೇದ ಮಂತ್ರ ಘೋಷಣೆಗಳೊಂದಿಗೆ ದಿ.28.10.2020ರಂದು ನೆರವೇರಿದೆ. ಜಗದ್ಗುರು ಶ್ರೀ ಆದಿ ಶಂಕರಾಚಾರ್ಯ ತೋಟಕಾಚಾರ್ಯ ಸಂಸ್ಥಾನ ಪರಂಪರೆಗೆ ಸೇರಿದ ಎಡನೀರು ಮಠದ ನೂತನ ಮಠಾಧಿಪತಿಯವರಿಗೆ ಬಳಗದ ಭಕ್ತಿಪೂರ್ವಕ ಪ್ರಣಾಮಗಳು.

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

## HOTEL AJANTHA GROUP OF HOSPITALITY SERVICES

# HOTEL AJANTHA

***A Boarding and Lodging Hotel of repute with spacious place for parking Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

*With best compliments*

# FIRETECH

## BOILERS PRIVATE LTD.

(An ISO 9001 : 2015 Certified Company)

**Office:** "FIRETECH HOUSE" , No. 211, 2nd Cross, 38th Main, B.T.M Layout, 2nd Stage, Bangalore - 560 068, Karnataka. Ph.: 080-26683686 / 26683921, Mob. : 73384 87934

**Works:** 121/C2,Bommasandra Industrial Area, Anekal Taluk, Bangalore - 560 099, Karnataka. Ph.: 080-27834189

E-mail : firetechhouse@gmail.com

Website : www.firetechboilers.com

## *Manufacturing Steam Boilers (IBR & Non IBR)*

- Thermic Fluid Heaters
- Hot Air Generators
- Waste Heat Boilers
- Agro Dryers





- Heat Exchanger
- MDC
- Accumulator etc.,







ಗೃಹ ಹಾಗೂ ವಾಹನ ಸಾಲ
ಕೊಳ್ಳಲು ಸುಲಭ ಕೀಲಿ ಕೈ
ಕೆಬಿಎಲ್ ಅಪ್ನಾ ಘರ್ &
ಕೆಬಿಎಲ್ ಕಾರು ಸಾಲ
ಕೂಡಲೇ ಆಕರ್ಷಕ ರಿಯಾಯಿತಿಗಳ ಲಾಭವನ್ನು ಪಡೆಯಿರಿ
ಡಿಜಿಟಲ್ ಸಾಲ ಗಳಿಗೆ
ಬಡ್ಡಿ ದರಗಳ ಮೇಲೆ
0.10%
ಹೆಚ್ಚುವರಿ ರಿಯಾಯಿತಿ
ಡಿಜಿಟಲ್ ಮಂಜೂರಾತಿ ಗಳಿಗೆ
ಸಂಸ್ಕರಣಾ ವೆಚ್ಚಗಳ ಮೇಲೆ
25%
ಹೆಚ್ಚುವರಿ ರಿಯಾಯಿತಿ
ಈ ರಿಯಾಯಿತಿಗಳು
ಪಿಎಂಎವೈ ಸ್ಕೀಂ
ಡಿಜಿಟಲ್ ಮಂಜೂರಾತಿ
ಗಳಿಗೂ ಲಭ್ಯ
ಅತ್ಯಾಕರ್ಷಕ
ಬಡ್ಡಿದರಗಳು
ತಕ್ಷಣವೇ ಸಾಲ
ಮೊತ್ತ ಮಂಜೂರಾತಿ
ಅತ್ಯಂತ ಸರಳ
ಪ್ರಕ್ರಿಯೆ
Follow us on : / KarnatakaBank
1800 425 1444
ಕರ್ಣಾಟಕ ಬ್ಯಾಂಕ್
CIN: L85110KA1924PLC001128

# FRIDGE HOUSE

Distributor & Dealer for

HAVELLS Brand (Lloyd) AC's & CARRIER MIDEA Air Conditioners



Split AC



Cassette AC



Tower AC



Window AC



Ductable AC

Contact Persons: Mr. M K Prasad & Mr. B Krishnaswamy – M: 9845330571

# FRIDGE HOUSE

FRIDGE HOUSE DELIVERING TRUST

Enriching Lives

## Wholesaler & Importers,

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

## EQUIPMENTS & COMPONENTS. for

HVAC & R,* COLD ROOMS,* RIPENING CHAMBERS,* HEAT PUMPS.

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
**Email ID :** info@fridgehouse.net; **Web Site:** www.fridgehouse.net

Contact Persons: M.K. Prasad & Mr. Nagesh D Prabhu – M: 9845217197

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments from :*

# ಹೋಟೆಲ್ ಶೀತಲ್

**ಆನಂದರಾವ್ ವೃತ್ತ, ಬೆಂಗಳೂರು – 560 009**

## HOTEL Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

---

**ಶುಭಾಶಯಗಳನ್ನು ಕೋರುವವರು**



॥ ಹರಿಃ ಓಂ ॥

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)



**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ
ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ
ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು
ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ
ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in





# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

### Services Offered :

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:

| | |
|---|---|
| MR. DINESH RAO MUNDRUPPADY | MOB: 99456 88955 |
| MR. VASUDEVAN T S | MOB: 98450 26743 |
| MR. VIJAY KUMAR KULKARNI | MOB: 99456 96649 |

With Best Compliments From :

# M. BHASKAR RAO

## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

# ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್
ಬೆಂಗಳೂರು 560 002
ಮೊಬೈಲ್ : 99724 29854







## ಬೃಂದಾವನ ಗೆಸ್ಟ್ ಹೌಸ್

## BRINDAVANA GUEST HOUSE


*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ. : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

# ತುಳು ಭಾಷೆ ಒಂದಿಷ್ಟು ಪರಿಚಯ




ಭೃಗುವಾಣಿಯಲ್ಲಿ ತುಳು ಭಾಷೆಯಲ್ಲಿ ಕೂಡಾ ಲೇಖನಗಳನ್ನು ಕವನಗಳನ್ನು ಪ್ರಕಟಿಸುವ ಅವಕಾಶ ಇದೀಗ ಲಭ್ಯವಾಗಿದೆ. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ಭಾಷೆಗೆ ತನ್ನದೇ ಆದ ಹಿರಿಮೆ–ಗರಿಮೆಗಳಿವೆ. ಸಂಸ್ಕೃತದ ಸಾಹಿತ್ಯ, ವೇದ, ಮಂತ್ರಗಳನ್ನು ತಾಳೆಗರಿಯಲ್ಲಿ ದಾಖಲಿಸಲು ನಮ್ಮ ಪೂರ್ವಿಕರು ತುಳು ಲಿಪಿಯನ್ನು ಬಳಸುತ್ತಿದ್ದರು. ಸಾಮಾನ್ಯವಾಗಿ ತಿಗಳಾರಿ ಲಿಪಿ ಮೂಲಕ ತುಳು ಭಾಷೆಯನ್ನು ಬಳಸುತ್ತಿದ್ದು, ಪ್ರಸಕ್ತ ವಿದ್ಯಾಮಾನದಲ್ಲಿ ಕನ್ನಡ ಲಿಪಿಯನ್ನೇ ಬಳಸಿಕೊಂಡು ತುಳುಭಾಷೆಯ ಸಾಹಿತ್ಯವನ್ನು ರಚಿಸಲಾಗುತ್ತಿದೆ.


ಆದರೆ ಇತ್ತೀಚೆಗೆ ತುಳು ಲಿಪಿಯನ್ನು ಪರಿಚಯಿಸುವ ಕೆಲಸವನ್ನು ಅನೇಕ ವ್ಯಕ್ತಿ ಮತ್ತು ಸಂಸ್ಥೆಗಳು ಮಾಡುತ್ತಿದ್ದು, ಅದನ್ನು ಕಲಿಯುವಲ್ಲಿ ಜನರ ಆಸಕ್ತಿಯೂ ಜಾಸ್ತಿಯಾಗುತ್ತಿದೆ. ರಾಜ್ಯ ಸರ್ಕಾರ ಸ್ಥಾಪಿಸಿದ ತುಳು ಸಾಹಿತ್ಯ ಅಕಾಡಮಿ ಕೂಡಾ ತುಳುಭಾಷೆಯ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸುತ್ತಿದೆ. ಕರಾವಳಿ ಜಿಲ್ಲೆಯ ಕೆಲವೊಂದು ಶಾಲೆಗಳಲ್ಲಿ ತುಳು ಭಾಷೆಯನ್ನು ಅಳವಡಿಸಿರುವುದಲ್ಲದೆ ಮಂಗಳಾ ವಿಶ್ವವಿದ್ಯಾಲಯದಲ್ಲಿ ತುಳು ಭಾಷೆಗಾಗಿ ಪ್ರತ್ಯೇಕವಾದ ವಿಭಾಗವನ್ನೇ ತೆರೆಯಲಾಗಿದೆ. 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಸುಮಾರು 11 ಲಕ್ಷ ಹಾಗೂ ದೇಶದಲ್ಲಿ ಸುಮಾರು 18.50 ಲಕ್ಷ ತುಳು ಮಾತನಾಡುವ ಜನರಿದ್ದಾರೆ ಎಂದು ದಾಖಲಿಸಲಾಗಿದೆ. ಒಂದು ಸ್ಥೂಲ ಅಂದಾಜಿನಂತೆ ವಿಶ್ವದಾದ್ಯಂತ ಸುಮಾರು 50 ಲಕ್ಷ ಜನ ತುಳು ಮಾತನಾಡುವವರಿದ್ದಾರೆ. 2021ನೇ ಜನಗಣತಿ ಮುಕ್ತಾಯವಾದಾಗ ಈ ಅಂಕಿ–ಸಂಖ್ಯೆಗಳು ಗಣನೀಯವಾಗಿ ಏರುಮುಖವಾಗಲಿದೆ ಎಂದು ಸಹಜವಾದ ನಿರೀಕ್ಷೆ. ತುಳು ಆಡು ಭಾಷೆಯನ್ನು ಪರಿಗಣಿಸುವುದಾದರೆ, ಸಾಮಾನ್ಯ ತುಳು, ಬ್ರಾಹ್ಮಣ ತುಳು, ಜೈನರ ತುಳು ಹಾಗೂ ಗಿರಿಜನರ ತುಳು ಎಂಬ ನಾಲ್ಕು ಪ್ರಕಾರಗಳನ್ನು ಗುರುತಿಸಲಾಗಿದೆ.

ತುಳುಭಾಷೆಯನ್ನು ಮತ್ತು ಲಿಪಿಯನ್ನು ಪರಿಚಯಿಸಿ, ಜನಪ್ರಿಯಗೊಳಿಸುವಲ್ಲಿ ಭೃಗುವಾಣಿಯೂ ತನ್ನದೇ ಆದ ಇತಿಮಿತಿಯಲ್ಲಿ ಯತ್ನಿಸಲಿದೆ. ಈ ಅಭಿಯಾನದ ಮೊದಲ ಹಂತವಾಗಿ ಈ ಸಂಚಿಕೆಯಲ್ಲಿ ತುಳು ಲಿಪಿಗಳ ಪರಿಚಯವನ್ನು ಓದುಗರಿಗಾಗಿ ಮಾಡಿಕೊಡಲಾಗಿದೆ;



# ಭಗವಂತನ ದಿವ್ಯ ಸಾನ್ನಿಧ್ಯ 'ಸಾಲಿಗ್ರಾಮ'

– ಕುಂಜತ್ತಾಯ ರಾಘವೇಂದ್ರ ರಾವ್




**ಸಾಲಿಗ್ರಾಮಶಿಲಾಂ ದೃಷ್ಟ್ವಾ ಯಾಂತಿ**
**ಪಾಪಾನಿ ದೇಹಿನಾಮ್ ।**
**ಸಿಂಹಂ ದೃಷ್ಟ್ವಾ ಯಥಾ ಯಾಂತಿ ವನೇ**
**ಮೃಗಗಣಾ ಭಯಾತ್ ॥**

"ಸಿಂಹವನ್ನು ನೋಡಿದಾಕ್ಷಣ ಕಾಡಿನಲ್ಲಿರುವ ಜಿಂಕೆಗಳೆಲ್ಲವೂ ಹೇಗೆ ಭಯದಿಂದ ಓಡಿ ಹೋಗುತ್ತವೆಯೋ ಹಾಗೆ ಸಾಲಿಗ್ರಾಮ ಶಿಲೆಯ ದರ್ಶನಮಾತ್ರದಿಂದಲೇ ಮನುಷ್ಯರ ಶಾಪಗಳೆಲ್ಲವೂ ಓಡಿಹೋಗುತ್ತವೆ."

ಹೀಗಿರುವಾಗ ಸಾಲಿಗ್ರಾಮಗಳ ಬಗ್ಗೆ ಅಂಜಿಕೆಗೆ ನಮ್ಮ ಅಜ್ಞಾನವೇ ಕಾರಣ. ಸಾಲಿಗ್ರಾಮದ ಬಗ್ಗೆ ತಿಳಿಯಬೇಕಾದ್ದು ಬಹಳವಿದೆ. ಅಲ್ಪವಾದರೂ ತಿಳಿಯಲು ಪ್ರಯತ್ನಿಸೋಣ.

ಸಾಲಿಗ್ರಾಮ ಶಿಲೆಗಳು ನೇಪಾಳದ ಗಂಡಕೀ ನದಿಯಲ್ಲಿ ದೊರೆಯುತ್ತವೆ. ನದಿಯ ನೀರು ಹರಿಯುವ ರಭಸಕ್ಕೆ ಶಿಲೆಗಳು ಗುಂಡುಗುಂಡಾದ ನಾನಾ ಆಕಾರಗಳನ್ನು ತಳೆಯುವುದನ್ನು ನಾವು ಯಾವುದೇ ನದೀತೀರಲ್ಲೂ ನೋಡಬಹುದು. ಆದರೆ ಗಂಡಕೀ ನದಿಯಲ್ಲಿರುವ "ವಜ್ರಕೀಟ" ಎಂಬ ಕೀಟವು ಆ ಶಿಲೆಗಳನ್ನು ಕೊರೆದು ರಂಧ್ರಮಾಡಿ ಒಳಗೆ ಚಕ್ರದಂತಹ ರಚನೆಯನ್ನು ಮಾಡುತ್ತದೆ. ಇಂಥ ಸಾಲಿಗ್ರಾಮದಲ್ಲಿ ವಿಷ್ಣುವು ಸದಾ ವಾಸವಾಗಿರುತ್ತಾನೆ. ಆದ್ದರಿಂದ ಇದನ್ನು ಮುಟ್ಟಿದರೆ ಸಾಕು, ನೋಡಿದರೆ ಸಾಕು ನಮ್ಮ ಪಾಪವೆಲ್ಲವೂ ನಾಶವಾಗುತ್ತದೆಂದು ಶಾಸ್ತ್ರಗ್ರಂಥಗಳು ಹೇಳುತ್ತವೆ. ಹೀಗಿರುವಾಗ ಸಾಲಿಗ್ರಾಮಗಳ ಬಗ್ಗೆ ಇನ್ನು ಭಯವೇಕೆ?

ಸಾಲಿಗ್ರಾಮಗಳನ್ನು ಪರೀಕ್ಷಿಸಿ ವಿಂಗಡಿಸುವಾಗ ಮುದ್ರಾ, ಕ್ಷೇತ್ರ, ಪರಿಮಾಣ, ಆಸನ ಮತ್ತು ಮೂರ್ತಿ ಎಂಬ ಭೇದದ ವಿವರಗಳ್ನು ಗಮನಿಸುತ್ತಾರೆ.




**ಮುದ್ರೆ :** ಕಲ್ಲಿನ ಆಕೃತಿ – ಮೀನಿನಂತಿದ್ದರೆ ಮತ್ಸ್ಯಮೂರ್ತಿ ಸಾಲಿಗ್ರಾಮ. ಕುದುರೆಯ ಮುಖದಂತಿದ್ದರೆ ಹಯಗ್ರೀವ ಸಾಲಿಗ್ರಾಮ. ಹಂದಿಯ ಮೋರೆಯಂತಿದ್ದರೆ ವರಾಹಮೂರ್ತಿ ಸಾಲಿಗ್ರಾಮ ಇತ್ಯಾದಿಯಾಗಿ ತಿಳಿಯಬೇಕು. ಇದಲ್ಲದೆ ಕೆಲವು ಶಿಲೆಗಳಲ್ಲಿ ಕೆಲವು ಲಾಂಛನಗಳು ಗೋಚರಿಸುತ್ತವೆ. ಶಂಖ, ಚಕ್ರ, ಧನಸ್ಸು, ಪರಶು, ಕೌಸ್ತುಭ ಇತ್ಯಾದಿ.

**ಕ್ಷೇತ್ರ ಮತ್ತು ವರ್ಣಗಳು :** ವಾಮನ ಶಿಲೆ, ದಾಮೋದರ ಶಿಲೆ ಕರಿಯ ಛಾಯೆಯನ್ನು ಹೊಂದಿರುತ್ತದೆ. ನರಸಿಂಹ ಸಾಲಿಗ್ರಾಮವು ಕಪ್ಪು ಶಿಲೆ, ಅನಿರುದ್ಧ ಸಾಲಿಗ್ರಾಮವು ನೀಲಿಬಣ್ಣ. ಶ್ರೀಧರ ಸಾಲಿಗ್ರಾಮವು ಹಳದಿ ಛಾಯೆ ವಾಸುದೇವ ಸಾಲಿಗ್ರಾಮವು ಕಪ್ಪು–ಬಿಳಿ ಛಾಯೆಯ ಜೊತೆಗೆ, ಬಂಗಾರದ ರೇಖೆಗಳಿರುತ್ತದೆ.

ಸಂಕರ್ಷ ಸಾಲಿಗ್ರಾಮವು ಕೆಂಪು, ಕಪಿಲ ಮೂರ್ತಿಯು ಕಾವಿ ಬಣ್ಣ, ಅನಂತ ಮೂರ್ತಿ ಸಾಲಿಗ್ರಾಮವು ನಾನಾವರ್ಣವಾಗಿರುತ್ತದೆ.

**ಪರಿಮಾಣ :** (ಸಾಲಿಗ್ರಾಮಗಳ ಗಾತ್ರ ಸುತ್ತಳತೆ ಆಧಾರ) ದೊಡ್ಡ ದೊಡ್ಡ (ತೆಂಗಿನಕಾಯಿ ಗಾತ್ರದ್ದೂ ಸಹ ಇರುತ್ತವೆ) ಸಾಲಿಗ್ರಾಮಗಳನ್ನು ದೇವಾಲಯಗಳಲ್ಲಿಟ್ಟು ಪೂಜಿಸುತ್ತಾರೆ. ಏಕೆಂದರೆ ನೈವೇದ್ಯಾದಿಗಳು ಹೆಚ್ಚು ಬೇಕಾಗುತ್ತದೆ. ಮನೆಯಲ್ಲಿಟ್ಟು ಪೂಜಿಸಲು ಚಿಕ್ಕಚಿಕ್ಕ ಸಾಲಿಗ್ರಾಮವೇ ಶ್ರೇಷ್ಠ. ಚಿಕ್ಕದಾದಷ್ಟೂ ಪ್ರಭಾವ ಹೆಚ್ಚು. ನೆಲ್ಲಿಕಾಯಿ ಗಾತ್ರದ ಸಾಲಿಗ್ರಾಮವು ತುಂಬಾ ಶ್ರೇಷ್ಠ. ನಮ್ಮ ಮುಷ್ಟಿಯೊಳಗಿರುವಷ್ಟಿದ್ದರೆ ಉತ್ತಮವೆಂದು ಶಾಸ್ತ್ರಗಳು ಹೇಳುತ್ತವೆ.

**ಆಸನ :** ಸಾಲಿಗ್ರಾಮಗಳ ಒಂದು ಬದಿಯಲ್ಲಿ ಚಪ್ಪಟೆ ಭಾಗವಿರುತ್ತದೆ. ಅದನ್ನು ಆಸನವೆನ್ನುತ್ತಾರೆ. ದೃಢವಾಗಿ ಕುಳಿತರೆ (ತಟ್ಟೆಯಲ್ಲಿಟ್ಟಾಗ) ಸ್ಥಿರಾಸನ. ಕೆಲವು ಪಕ್ಕಕ್ಕೆ ವಾಲುತ್ತವೆ. ಅದು ಪಾರ್ಶ್ವ ಆಸನ. ಕೆಲವು ಬಹಳ ಗುಂಡಾಗಿರುವುದರಿಂದ ಅಲ್ಲಾಡುತ್ತವೆ. ಇದು ಚಲಾಸನ ಇತ್ಯಾದಿ. ಸ್ಥಿರಾಸನದ ಸಾಲಿಗ್ರಾಮವು ಮನೆಯಲ್ಲಿಡಲು ಉತ್ತಮವೆನ್ನುತ್ತಾರೆ.

**ಚಕ್ರಗಳು :** ಸಾಲಿಗ್ರಾಮಗಳಲ್ಲಿರುವ ವದನ (ಮುಖ)ಗಳ ಮತ್ತು ಅದರೊಳಗೆ ಅಥವಾ ಹೊರಗಿರುವ ಚಕ್ರಗಳ ಸಂಖ್ಯೆ ಆಧಾರದ ಮೇಲೆ ಹೆಸರಿಸುತ್ತಾರೆ. ವದನದೊಳಗೆ ಮೇಲೆ

ಅಥವಾ ಎದುರು ಬದುರಾಗಿದ್ದರೆ ಶ್ರೇಷ್ಠವೆನ್ನುತ್ತಾರೆ. ಸ್ಥಿರಾಸನದಲ್ಲಿದ್ದರೆ ಅಥವಾ ಒಂದಕ್ಕೊಂದು ಅಂಟಿಕೊಂಡಿದ್ದರೆ, ಬಹುಚಕ್ರ, ವಕ್ರಚಕ್ರ, ತಿರ್ಯಕ್‌ಚಕ್ರವಿದ್ದರೆ ಪೂಜೆಗೆ ಅನರ್ಹ.

ಚಕ್ರಗಳ ಸಂಖ್ಯೆಗಳ ಆಧಾರದ ಮಳೆ ಹೆಸರು. ಉದಾಹರಣೆಗೆ ಒಂದು ಚಕ್ರವಿದ್ದರೆ ಸುದರ್ಶನ, ಎರಡು ಚಕ್ರವಿದ್ದರೆ ಲಕ್ಷ್ಮೀನಾರಾಯಣ, ಮೂರು ಚಕ್ರವಿದ್ದರೆ ವಾಸುದೇವ, ಆರು ಚಕ್ರವಿದ್ದರೆ ಸಂಕರ್ಷಣ, ಹನ್ನೆರಡು ಚಕ್ರವಿದ್ದರೆ ಅನಂತಮೂರ್ತಿ ಇತ್ಯಾದಿ. ಅನಂತಮೂರ್ತಿ ಸಾಲಿಗ್ರಾಮವು ಬಹು ಶ್ರೇಷ್ಠವಾದದ್ದು

ಅತಿ ದೊಡ್ಡ ಸಾಲಿಗ್ರಾಮ ಶಿಲೆಗಳು ಒಡೆದುಹೋಗಿದ್ದರೆ ಅದರಲ್ಲಿ ಮೂರ್ತಿಗಳನ್ನು ಕೆತ್ತಿ ಪೂಜಿಸುತ್ತಾರೆ. ಉಡುಪಿಯಲ್ಲಿ ಇರುವ ಶ್ರೀ ಕೃಷ್ಣಮೂರ್ತಿ, ಬದರಿಯಲ್ಲಿರುವ ನಾರಾಯಣ ಮೂರ್ತಿ ಇವು ಸಾಲಿಗ್ರಾಮ ವಿಗ್ರಹಗಳು. ನಮ್ಮ ಮನೆಯಲ್ಲೂ ಐದು ಇಂಚು ಉದ್ದದ ಮುಕ್ತಿನಾಥ ಮತ್ತು ಶ್ರೀನಿವಾಸ ದೇವರ ಸಾಲಿಗ್ರಾಮ ಶಿಲಾ ಮೂರ್ತಿಗಳಿವೆ.

**ಸಾಲಿಗ್ರಾಮದ ವೈಚಿತ್ರ್ಯಗಳು** : ಜ್ವಾಲಾನರಸಿಂಹ ಸಾಲಿಗ್ರಾಮವು ಕರಿಯ ಶಿಲೆಯಾದರೂ ಬೆಳಕಿಗೆ ಹಿಡಿದರೆ ಶಿಲೆಯೊಳಗೆ ಬೆಳಕು ಉರಿಯುವಂತೆ ಕಾಣಿಸುತ್ತದೆ. ಕುಕ್ಕೆ ಸುಬ್ರಹ್ಮಣ್ಯ ಮಠದಲ್ಲಿ ತೆಂಗಿನಕಾಯಿ ಗಾತ್ರದ ನರಸಿಂಹ ಸಾಲಿಗ್ರಾಮವಿದೆ. ರತ್ನಗರ್ಭ ಸಾಲಿಗ್ರಾಮವು ಪಾರದರ್ಶಕ. ಬಿಸಿಲಿನಲ್ಲಿಟ್ಟರೆ ನೀಲಿ ಬಣ್ಣಕ್ಕೆ ತಿರುಗುತ್ತದೆ. ಲಾಜಾವರ್ತಿ ಸಾಲಿಗ್ರಾಮವು ಬಿಸಿಲಿನಲ್ಲಿಟ್ಟಾಗ ಕಾವಿ ಬಣ್ಣಕ್ಕೆ ತಿರುಗುತ್ತದೆ. ಪಟ್ಟಾಭಿರಾಮ ಸಾಲಿಗ್ರಾಮಕ್ಕೆ ಮೂರು ವದನಗಳಿದ್ದು ಆರು ಚಕ್ರವಿದೆ. ಕೆಲವು ಸಾಲಿಗ್ರಾಮ ಶಿಲೆಗಳ ಮೇಲ್ಭಾಗದಲ್ಲಿ ಬಿಲ್ಲು ಬಾಣಗಳ ಆಕಾರಗಳೂ, ಬಂಗಾರದ ಅಥವಾ ಬೆಳ್ಳಿಯ ರೇಖೆಗಳೂ ಇರುತ್ತವೆ.

**ಮೂಢನಂಬಿಕೆ** : ಸಾಲಿಗ್ರಾಮದ ವಿಷಯದಲ್ಲಿ ಜನಸಾಮಾನ್ಯರಲ್ಲಿ ಭಕ್ತಿಗಿಂತ ಭಯವೇ ಹೆಚ್ಚಾಗಿದೆ. ತುಂಬ ಮಡಿಬೇಕು, ಹೆಂಗಸರು ಮುಟ್ಟಬಾರದು ಇತ್ಯಾದಿ. ಇವುಗಳಿಗೆ ಯಾವ ಶಾಸ್ತ್ರಾಧಾರವೂ ಇಲ್ಲ. ಕೈ, ಕಾಲು ವಸ್ತ್ರಗಳು ಸ್ವಚ್ಛವಾಗಿದ್ದರೆ ನಾವು ದೇವ ಫೋಟೋಗಳನ್ನು ಮುಟ್ಟಿ ಪೂಜಿಸುವಂತೆಯೇ ಭಕ್ತಿಯಿಂದ ಪೂಜಿಸಬಹುದು. ಸಾಲಿಗ್ರಾಮದಲ್ಲಿ ಸದಾ ಭಗವಂತನ ಸಾನ್ನಿಧ್ಯ ವಿರುವುದರಿಂದ ಮೈಲಿಗೆಯು ನಾಶವಾಗಿ ಮಡಿ ಯಾಗುತ್ತೇವೆ. ಅಗ್ನಿಯು ತನ್ನ ಸಂಪರ್ಕಕ್ಕೆ ಬಂದ ಯಾವುದೇ ವಸ್ತುವನ್ನು ದಹಿಸುವಂತೆ ಸಾಲಿಗ್ರಾಮ ಮೈಲಿಗೆಯನ್ನು ಮತ್ತು ನಮ್ಮ ಪಾಪರಾಶಿಗಳನ್ನು ದಹಿಸಿ ನಾಶ ಮಾಡುತ್ತದೆ ಎಂದಿರುವಾಗ ಅಂಜಿಕೆ ಬೇಡ. ಪೂಜಿಸಿ.

**ಪೂಜೆ ಪುನಸ್ಕಾರಗಳು** : ಮಾನವ ನಿರ್ಮಿತ ವಿಗ್ರಹಗಳಿಗೆ ಪೂಜಿಸಬೇಕಾದರೆ ವಿಗ್ರಹವನ್ನು ಶುದ್ಧಗೊಳಿಸಿ ಶಾಸ್ತ್ರೋಕ್ತವಾಗಿ ಪ್ರಾಣಪ್ರತಿಷ್ಠೆ ಮಾಡಿ ನಂತರ ಪೂಜಿಸಬೇಕು. ಆದರೆ ಸಾಲಿಗ್ರಾಮ ಶಿಲೆಯನ್ನು ಪೂಜಿಸಲು ಯಾವ ಕಟ್ಟುಪಾಡುಗಳೂ ಇಲ್ಲ. ಯಾವ ಮಂತ್ರೋಪದೇಶವೂ ಬೇಡ. ನಿಮಗಿಷ್ಟ ಬಂದ ರೀತಿಯಲ್ಲಿ ಭಕ್ತಿಯಿಂದ ಪೂಜಿಸಿ. ಸಾಲಿಗ್ರಾಮದ ದರ್ಶನ, ಸ್ಪರ್ಶನವೇ ಸಾಕೆಂದು ಶಾಸ್ತ್ರ ಹೇಳುತ್ತಿರುವಾಗ ಪುರೋಹಿತರಿಗೂ ಕಾಯಬೇಕಾದ್ದಿಲ್ಲ. ಪೂಜಿಸಿ. ಭಯಬೇಡ.

**ಗಂಧಮಾಲ್ಯಾರ್ಚ್ಯನೈವೇದ್ಯೈಃ ಪುಷ್ಪಧೂಪಾನುಲೇಪನೈಃ ।**
**ಅರ್ಚಯೇನ್ಮಾನವೋ ಯಸ್ತು ಕಲೌ ಭಕ್ತಿಪರಾಯಣಃ**
**ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ವಸೇಚ್ಚಿರಮ್ ॥**

ಎಂದು ಶಾಸ್ತ್ರವಿದೆ. ಫಲಪುಷ್ಪ ಗಂಧಧೂಪದೀಪ ನೈವೇದ್ಯಾದಿ ಗಳನ್ನು ಸಮರ್ಪಿಸಿ ಸರಳವಾಗಿ ಪೂಜಿಸಬಹುದು. ಇದಾವುದು ಇಲ್ಲದಿದರೂ ಒಂದು ದಳ ತುಳಸಿ ಇಟ್ಟರೂ ಸಾಕು. ತುಳಸಿಗೂ ಸಾಲಿಗ್ರಾಮಕ್ಕೂ ಅವಿನಾಭಾವ ಸಂಬಂಧ. ತುಳಸಿಯ ಸ್ಪರ್ಶದಿಂದ ಸಾಲಿಗ್ರಾಮದಲ್ಲಿ ದೇವ ಸಾನ್ನಿಧ್ಯವು ವೃದ್ಧಿಯಾಗುತ್ತದೆಂದು ಶಾಸ್ತ್ರ ಹೇಳುತ್ತದೆ. (ಅದೇ ಒಂದು ದೊಡ್ಡ ಕಥೆ) ಆದ್ದರಿಂದ ಭಯಬಿಟ್ಟು ಭಕ್ತಿಯಿಂದ ಯಾರು ಬೇಕಾದರೂ ಜಾತಿ–ಮತ ಲಿಂಗ ಭೇದವಿಲ್ಲದೆ ಪೂಜಿಸಬಹುದು.

**ಕೋಟಿದ್ವಾದಶಕೈರ್ಲಿಂಗಾನ್ಯೈಃ ಪೂಜಿತೈಃ ಸ್ವರ್ಣಪಂಕಜೈಃ ।**
**ಯತ್ಸ್ಯಾದ್ವಾದಶ ಕಲ್ಪೇಷು ದಿನೇನೈಕೇನ ಲಭ್ಯತೇ ॥**

ಹನ್ನೆರಡು ಕೋಟಿ ಲಿಂಗಗಳನ್ನು ಬಂಗಾರದ ಕಮಲದ ಹೂವಿನಿಂದ ಹನ್ನೆರಡು ಕಲ್ಪಗಳಲ್ಲಿ ಪೂಜಿಸಿದರೆ ಎಷ್ಟು ಫಲವು ದೊರೆಯುವುದೋ ಅಷ್ಟು ಫಲವು ಒಂದು ಸಾಲಿಗ್ರಾಮಕ್ಕೆ ಒಂದು ದಿನ ಪೂಜಿಸಿದಲ್ಲಿ ದೊರೆಯುತ್ತದೆ." ಎಂದ ಮೇಲೆ ಇನ್ನೇಕೆ ಭಯ?

"ಬ್ರಹ್ಮ ವೈವರ್ತ ಪುರಾಣದ ಒಕ್ಕಣೆಯಂತೆ ಕಲಿಯುಗದಲ್ಲಿ ಹತ್ತು ಸಾವಿರ ವರ್ಷಗಳು ಕಳೆದ ಮೇಲೆ ಸಾಲಿಗ್ರಾಮಗಳಲ್ಲಿ ದೇವತಾ ಸಾನ್ನಿಧ್ಯವಿರುವುದಿಲ್ಲ" ಎಂದಿದೆ. ಇಂದಿಗೆ ಅಂದರೆ 2020ನೆ ಇಸವಿಗೆ ಕಲಿಯುಗದ 5097 ವರ್ಷಗಳು ಕಳೆದಿವೆ. ಅಂದರೆ ಇನ್ನೂ ಸುಮಾರು 4903 ವರ್ಷಗಳ ಕಾಲ ಸಾಲಿಗ್ರಾಮವು ಪ್ರಭಾವಶಾಲಿಗಳಾಗಿರುತ್ತವೆ. ಅಂದ ಮೇಲೆ ಬನ್ನಿ, ದರ್ಶಿಸಿ, ಸ್ಪರ್ಶಿಸಿ, ಪೂಜಿಸಿ, ಭಕ್ತಿಯಿಂದ ಕೈಮುಗಿದು ಪ್ರಾರ್ಥಿಸಿ, ಇಷ್ಟಿದ್ದರೂ ಮೂಢನಂಬಿಕೆಯಿಂದ ಬಾವಿಗೋ, ಕೆರೆಗೋ ನದಿಗೋ ಹಾಕುತ್ತಾರೆ. ಇದಕೇನು ಮದ್ದೋ ಪುರಂದರ ವಿಠಲ? (ಓದುಗರ ಅನಿಸಿಕೆ ಸ್ವಾಗತವಿದೆ)

# ಕ್ಯಾಲೆಂಡರ್ – ಒಂದಿಷ್ಟು ಇತಿಹಾಸ ಮತ್ತು ಹಿನ್ನಲೆ

**ಈ ಸಂಚಿಕೆ ತಲುಪುವಷ್ಟರಲ್ಲಿ, ಎಲ್ಲರ ಮನೆಯ ಗೋಡೆಯಲ್ಲಿ ಹಳೆ ಕ್ಯಾಲೆಂಡರ್ ತನ್ನ ಕೆಲಸ ಮುಗಿಯಿತೆಂದು ಕೆಳಗಿಳಿದು, ಹೊಸ ಕ್ಯಾಲೆಂಡರ್ ಆ ಜಾಗದಲ್ಲಿ ಬಂದು ಕುಳಿತಿರುತ್ತದೆ. ವರ್ಷಪೂರ್ತಿ ಪ್ರತಿದಿನದ ವಿಶೇಷ–ವೈಶಿಷ್ಟ್ಯಗಳನ್ನು ನಮಗೆ ತಿಳಿಸುವ ಈ ಕ್ಯಾಲೆಂಡರ್‌ನ ಇತಿಹಾಸದ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲಿದೆ – ಸಂ.**

ಕ್ಯಾಲೆಂಡರ್ ಎನ್ನುವುದು ವರ್ಷದ ಕೊನೆಗೆ ತಿರುಗಿ ಹಾಕುವ ಆಚರಣೆ ಮಾತ್ರ ಅಲ್ಲ. ಇದು ಕಾಲವನ್ನು ಅಳೆಯುವ ಸಾಧನ. ಈ ಶಬ್ದದ ಮೂಲ ಲ್ಯಾಟಿನ್ ಭಾಷೆಯ ಕ್ಯಾಲೆಂಡ್ಸ್ (Calends) ಅಂದರೆ ತಿಂಗಳ ಮೊದಲನೆಯ ದಿನ, ಅಮಾವಾಸ್ಯೆ ನಂತರ ಕಾಣುವ ಚಂದ್ರೋದಯದಿಂದ ರೋಮನ್ನರು ತಿಂಗಳನ್ನು ಲೆಕ್ಕ ಹಾಕುತ್ತಿದ್ದರು. ಲ್ಯಾಟಿನ್ನಿನಲ್ಲಿ ಕ್ಯಾಲೆಂಡರಿಯಮ್ (Calendariuam) ಎಂದರೆ ಲೆಕ್ಕದ ಪುಸ್ತಕ ಎಂದಾಗಿತ್ತು. ಪ್ರಾಚೀನ ರೋಮಿನಲ್ಲಿ ಪ್ರತೀ ಅಮಾವಾಸ್ಯೆಯ ಮೊದಲದಿನ ಕ್ಯಾಲೆಂಡ್ಸ್‌ದಂದು ತಿಂಗಳ ಲೆಕ್ಕಾಚಾರವನ್ನು ಮುಕ್ತಾಯಗೊಳಿಸಬೇಕಿತ್ತು. ತಿಂಗಳನ್ನು ಅಳೆಯುವ ಮೂಲಕ ಜಗತ್ತಿನ ಎಲ್ಲಾ ನಾಗರಿಕತೆಗಳು ತಮ್ಮ ಅಯುರ್ಮಾನವನ್ನು ಗುಣಿಸಲು ಪ್ರಾರಂಭಿಸಿದರು. ಈ ದಿಸೆಯಲ್ಲಿ ಅವರಿಗೆ ಅರಿವಾದದ್ದು ಚಂದ್ರನನ್ನು ಅನುಸರಿಸಿ ಅಳೆಯುವ ಕಾಲದಲ್ಲಿ ಋತುಗಳ ಬದಲಾವಣೆ. ಪ್ರತಿ ವರ್ಷ ಬರುವ ಈಸ್ಟರ್ ಹಬ್ಬ ನಿಗದಿತ ತಿಂಗಳಿಗೆ ಅನುಗುಣವಾಗಿ ಬರದೇ ತುಂಬಾ ವ್ಯತ್ಯಾಸವನ್ನುಂಟು ಮಾಡಿಬಿಡುತ್ತಿತ್ತು. ಈ ಹೊತ್ತಿನಲ್ಲಿ ವರ್ಷಗಳ ಗಣನೆಗೆ ಸೂರ್ಯಮಾನ ಮುಖ್ಯ ಎಂದು ಮೊತ್ತ ಮೊದಲು ಪಾಶ್ಚಾತ್ಯರಲ್ಲಿ ರೋಮನ್ನರು ಕಂಡುಕೊಂಡರು. ಸೂರ್ಯಮಾನ ಪಂಚಾಂಗ ಪದ್ಧತಿ ಅದಾಗಲೇ ಇಜಿಪ್ಷಿಯನ್ಸ್ ನಾಗರಿಕತೆಯಲ್ಲಿ ಬಳಕೆಯಲ್ಲಿತ್ತು. ಅವರ ಸೌರಮಾನ ವರ್ಷದಲ್ಲಿ 365 ದಿನಗಳಿದ್ದವು. ಅವರ ವರ್ಷದಲ್ಲಿ 120 ದಿನಗಳ ಮೂರು ಋತುಗಳಿದ್ದವು. ವರ್ಷದ 365 ದಿನಗಳಾಗಬೇಕಾದರೆ ಐದು ಅಧಿಕ ದಿನಗಳನ್ನು (epagomenal days) ವರ್ಷದ ಕೊನೆಗೆ ಸೇರಿಸುತ್ತಿದ್ದರು. ಗ್ರೀಕರಿಗೂ ವರ್ಷಕ್ಕೆ 365.25 ದಿನಗಳಾಗಬೇಕೆಂದು ಹಿಪ್ಪಾರ್ಕಸ್‌ನ ಕಾಲದಿಂದಲೇ ಅರಿವಿತ್ತು. ಇಷ್ಟೆಲ್ಲಾ ಪ್ರಯತ್ನ ಮಾಡಿದರೂ ಈಸ್ಟರ್ ಹಬ್ಬ ಅವರ ಕ್ಯಾಲೆಂಡರಿಗೆ ಹೊಂದಿಕೆಯಾಗುತ್ತಿರಲಿಲ್ಲ. ಇದಕ್ಕೊಂದು ಪರಿಷ್ಕರಣೆಯ ರೂಪವನ್ನು ಕೊಟ್ಟವ ಜ್ಯೂಲಿಯಸ್ ಸೀಸರ್.

**ಜ್ಯೂಲಿಯನ್ ಕ್ಯಾಲಂಡರ್ :** ಜ್ಯೂಲಿಯಸ್ ಸೀಸರ್ (ಕ್ರಿ.ಪೂ. 100–44) ರೋಮಿನ ಸರ್ವೋಚ್ಚ ಅಧಿಕಾರಿಯಾಗುವ (Pontifex Maximus) ಹೊತ್ತಿನಲ್ಲಿ ಶರತ್ಕಾಲ ಜನವರಿಯಲ್ಲಿ ಬಂದಿತ್ತು. ಈ ಹೊತ್ತಿನಲ್ಲಿ ಋತುಗಳ ಕಾಲವೆಲ್ಲಾ ಅಯೋಮಯವಾಗಿಬಿಟ್ಟಿತ್ತು. ಈ ಗೊಂದಲಗಳ ಪರಿಹಾರಕ್ಕಾಗಿ ಸೀಸರ್, ಅಲೆಕ್ಸಾಂಡ್ರಿಯಾದ ಖಗೋಳ ಶಾಸ್ತ್ರಜ್ಞ ಸೊಸಿಜೆನ್ಸ್ ಎನ್ನುವಾತನ ನೆರವನ್ನು ಕೋರಿದ. ಆತ ಇಜಿಪ್ತ್ ದೇಶದಲ್ಲಿ ಬಳಕೆಯಿರುವ ಗಣಿತವನ್ನು ಆಧಾರವಾಗಿರಿಸಿಕೊಂಡು ಸೌರಮಾನಕ್ಕೆ ಅನುಗುಣವುಂಟಾಗುವಂತೆ ಮಾಡಲು 355 ದಿನಗಳ ಬದಲಾಗಿ 365 ದಿನಗಳನ್ನು ಬಳಕೆಗೆ ತರಲು ನಿರ್ಧರಿಸಿದ. ಬದಲಾದ ತಿಂಗಳು ಮತ್ತು ವರ್ಷಗಳನ್ನು ಆಯಾ ಋತುಗಳಿಗೆ ಸರಿಹೊಂದುವಂತೆ ಮಾಡಲು ಹಿಂದಿನ ತಲೆಮಾರುಗಳ ಕಾಲದಲ್ಲಾದ ಗಣಿತದ ಹೆಚ್ಚುವರಿ ಕಾಲದ ಗಣನೆಯ ತಪ್ಪುಗಳನ್ನು ಸರಿಮಾಡಬೇಕಾಗಿತ್ತು. ಆ ವರ್ಷದ ವಸಂತಕಾಲ ಮಾರ್ಚ್ ತಿಂಗಳಿಗೆ ಸರಿಯಾಗಿ ಹೊಂದುವಂತೆ ಮಾಡಿದರೆ ಈ ಕಾಲದ ಗೋಜಲುಗಳಿಗೊಂದು ತೆರೆ ಎಳೆಯಬಹುದೆಂದು ಎಂದು ಅವರೆಲ್ಲಾ ಸೇರಿ ಆಲೋಚಿಸಿದರು. ಆ ಕಾರಣಕ್ಕಾಗಿ ಆಗ ಬಳಕೆಯಲ್ಲಿರುವ ಕ್ಯಾಲೆಂಡರಿನ ತಿಂಗಳನ್ನು ಮತ್ತೊಂದಿಷ್ಟು ವಿಸ್ತರಿಸಬೇಕಾಗಿ ಬಂತು. ಹಾಗಾಗಿ ಕ್ರಿ.ಪೂ.46ನೇ ಇಸವಿಯನ್ನು 365 ದಿನಗಳ ಬದಲಾಗಿ 455 ದಿನಗಳಷ್ಟು ದೀರ್ಘಮಾಡಿಬಿಟ್ಟ ಈ ಕಾರಣದಿಂದ ಕ್ರಿ.ಪೂ.46 ಇತಿಹಾಸದಲ್ಲಿಯೇ ಅತ್ಯಂತ ದೀರ್ಘವಾದ ವರ್ಷವೆಂದು ದಾಖಲಾಗಿದೆ. ಆತನೇ ತಿಂಗಳುಗಳ ಲೆಕ್ಕಾಚಾರದಲ್ಲಿ ಕೈಬೆರಳನ್ನು ಮಡಚಿದಾಗಿನ ಹಸ್ತದ ಉಬ್ಬು ತಗ್ಗುಗಳ ಮೂಲಕ 30 ಮತ್ತು 31 ದಿನಗಳನ್ನು ರೂಢಿಗೆ ತಂದ. ಇಷ್ಟೆಲ್ಲಾ ಪ್ರಯತ್ನಗಳಿಂದಾಗಿ ಈ ಕ್ಯಾಲೆಂಡರ್ ಭೂಮಿಯ ಚಲನೆಯಾದ 365 ದಿನಗಳಿಗೆ ಹತ್ತಿರವಾಗಿತ್ತು. ದೀರ್ಘಕಾಲದ ಸಮಸ್ಯೆಯ ನಿವಾರಣೆಗಾಗಿ ಪ್ರತಿ ಎರಡು ವರ್ಷಗಳ ಮಧ್ಯಂತರ ತಿಂಗಳುಗಳ ಬದಲಾಗಿ ಪ್ರತಿ ನಾಲ್ಕು ವರುಷಕ್ಕೊಮ್ಮೆ ಒಂದು ದಿನವನ್ನು ಅಧಿಕ ದಿನವನ್ನಾಗಿ ರೂಢಿಗತಗೊಳಿಸಿದ. ಆ ತನಕ ಫೆಬ್ರುವರಿ ತಿಂಗಳು ವರ್ಷದ ಕೊನೆಯ ತಿಂಗಳಾಗಿರುತ್ತಿತ್ತು. ಮತ್ತು ವರ್ಷ ಬಿಟ್ಟು ವರ್ಷಕ್ಕೊಮ್ಮೆ ಇದೇ ತಿಂಗಳಲ್ಲಿ ಹೆಚ್ಚುವರಿ ತಿಂಗಳನ್ನು ಸೇರಿಸಲಾಗುತ್ತಿತ್ತು. ಫೆಬ್ರುವರಿ ತಿಂಗಳನ್ನೇ 28 ದಿನಗಳಾಗಿ

ಬದಲಾಯಿಸಿದ ಮತ್ತು ನಾಲ್ಕು ವರ್ಷಗಳಿಗೊಮ್ಮೆ ಅಧಿಕ ದಿನವನ್ನಾಗಿ ಒಂದು ದಿನವನ್ನು ಸೇರಿಸಿ ಅಧಿಕ ವರ್ಷದ ಅಧಿಕ ದಿನಗಳನ್ನಾಗಿ ಬದಲಾಯಿಸಿದ. ಅಧಿಕ ವರ್ಷಗಳನ್ನು ಆಯ್ಕೆ ಮಾಡಿಕೊಳ್ಳುವ ಸಲುವಾಗಿ ನಾಲ್ಕರಿಂದ ಭಾಗಿಸಲ್ಪಡುವ ಇಸವಿಯ ಫೆಬ್ರುವರಿ ತಿಂಗಳನ್ನು ಹೆಚ್ಚುವರಿ (Leap Day) ಅಧಿಕ ದಿನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಹಾಗಾಗಿ ಖಗೋಳ ಶಾಸ್ತ್ರಜ್ಞರು ಕ್ರಿ.ಪೂ. 46ನೆಯ ಇಸ್ವಿಯನ್ನು ಗೊಂದಲಗಳ ಅಂತಿಮ ವರ್ಷ (Last year of Cofusion) ಎಂದು ಕರೆದಿದ್ದಾರೆ. ಈ ಎಲ್ಲ ಕಾರಣದಿಂದ ಜ್ಯೂಲಿಯನ್ ಸೀಸರ್‌ನನ್ನು ಕ್ಯಾಲೆಂಡರಿನ ಪಿತಾಮಹ ಎಂದು ಕರೆಯುತ್ತಾರೆ.

ಈ ಜ್ಯೂಲಿಯನ್ ಕ್ಯಾಲೆಂಡರ್ ಸುಮಾರು ಎರಡು ಸಾವಿರ ವರುಷಗಳ ಅಸ್ತಿತ್ವದಲ್ಲಿದ್ದರೂ ಕಾಲದ ಅಳತೆ ನಿಖರವಾಗಿರಲಿಲ್ಲ. ಈ ಅವಧಿಯಲ್ಲಿ ವರ್ಷಪ್ರತಿ ಬರುವ ದಿನಮಾನಗಳು ಸೌರಮಾನಕ್ಕಿಂತ ತುಂಬಾ ಆಚೆ ಸರಿದಿತ್ತು. 16ನೆಯ ಶತಮಾನದಲ್ಲಿ ವಸಂತ ಕಾಲದ ಸಂಕ್ರಾಂತಿಯಂದು ಬರುವ ಈಸ್ಟರ್ ಹಬ್ಬ ಮಾರ್ಚ್ 31ರ ಬದಲು ಹತ್ತು ದಿನ ಮೊದಲೇ ಅಂದರೆ ಮಾರ್ಚ್ 11ಕ್ಕೆ ಬಂದಿತ್ತು (ಮಾರ್ಚ್ 21 ಮತ್ತು ಜೂನ್ 21 ಹಗಲು ರಾತ್ರಿ ಸಮನಾಗಿರುವ ದಿನ). ಈ ಸಮಸ್ಯೆಯನ್ನು ಗಮನಿಸಿದವರು ಪೋಪ್ ಗ್ರೆಗೊರಿ III.

**ಗ್ರೆಗೋರಿಯನ್ ಕ್ಯಾಲೆಂಡರ್** : ಕಾಲಗಣನೆಗೆ ಸರಿಯಾದ ಕ್ಯಾಲೆಂಡರಿನ ಅವಶ್ಯಕತೆಯಿರುವದನ್ನು ಅರಿತ ಅವರು ಆ ಕಾಲದ ಪ್ರಸಿದ್ಧ ತತ್ವಜ್ಞಾನಿ, ಖಗೋಳ ಶಾಸ್ತ್ರಜ್ಞ, ವೈದ್ಯ ಮತ್ತು ಕಾಲಮಾಪಕನೂ ಆಗಿದ್ದ ಅಲೋಷಿಯಸ್ ಲಿಲಿಯಸ್ ಎನ್ನುವವನೊಡನೆ ಸಮಾಲೋಚನೆ ನಡೆಸಿದರು. ಆತ ಮತ್ತು ಜೆಸುವೆಟ್ ಪಾದ್ರಿಯಾಗಿ ಮತ್ತು ಖಗೋಳಜ್ಞನೂ ಆಗಿದ್ದ ಕ್ರಿಷ್ಟೋಫರ್ ಕ್ಲೇವಿಯಸ್ ಎನ್ನುವವರು ಸೇರಿ ಜ್ಯೂಲಿಯನ್ ಪಂಚಾಂಗದಲ್ಲಿರುವ ದೋಷಗಳನ್ನು ಗುರುತಿಸಿದರು. ಜ್ಯೂಲಿಯನ್ ಪಂಚಾಂಗದ ಪ್ರಕಾರ ವರ್ಷದ ಅವಧಿ 365 ದಿನ ಮತ್ತು 6 ಗಂಟೆ. ಆದರೆ, ಭೂಮಿಯ ನೈಜ ಚಲನೆ 365 ದಿನ 5 ಘಂಟೆ 48 ನಿಮಿಷ ಮತ್ತು 46 ಸೆಕೆಂಡ್‌ಗಳು. ಈ ಸಣ್ಣ ಸಮಯದ ವ್ಯತ್ಯಾಸ ಪ್ರತಿ ನಾಲ್ಕು ನೂರು ವರುಷಗಳಿಗೊಮ್ಮೆ ಮೂರು ಹೆಚ್ಚಿನ ದಿನಗಳಷ್ಟು ವ್ಯತ್ಯಾಸವಾಗಿಬಿಡುತ್ತಿತ್ತು. ಕ್ಲೇವಿಯಸ್ ಮತ್ತು ಅಲೋಷಿಯಸ್ ಈ ವ್ಯತ್ಯಾಸವನ್ನು ಸರಿಪಡಿಸುವ ನಿಟ್ಟಿನಲ್ಲಿ ಜ್ಯೂಲಿಯನ್ ಕ್ಯಾಲೆಂಡರಿನ ಈ ಹೆಚ್ಚಿನ ದಿನವನ್ನು ತೆಗೆದರು ಮತ್ತು ನಾಲ್ಕು ವರ್ಷಗಳಿಗೊಮ್ಮೆ ಅಧಿಕ ವರ್ಷವಾಗಿ ಫೆಬ್ರುವರಿ ತಿಂಗಳಲ್ಲಿನ 29ನೆಯ ತಾರೀಖು ಎಂದು ಗೊತ್ತುಪಡಿಸಲಾಯಿತು. ಜ್ಯೂಲಿಯನ್ ಕ್ಯಾಲೆಂಡರಿನ ಪ್ರಕಾರ ನಾಲ್ಕರಿಂದ ಭಾಗಿಸಲ್ಪಡುವ ವರ್ಷಕ್ಕೆ ಅಧಿಕ ದಿನ ಬರುತ್ತದೆಯಷ್ಟೇ. ಈ ಪದ್ಧತಿಯಲ್ಲಿ ಬರುವ ನಾಲ್ಕು ನೂರು ವರ್ಷಗಳಿಗೊಮ್ಮೆಗಿನ ಹೆಚ್ಚಿನ ಮೂರು ದಿನಗಳನ್ನು ತೆಗೆಯುವ ಸಲುವಾಗಿ ಶತಮಾನದ ಕೊನೆಯ ವರುಷ ನಾಲ್ಕು ನೂರರಿಂದ ಭಾಗಿಸಲ್ಪಟ್ಟರೆ ಮಾತ್ರ ಆ ವರ್ಷದ ಫೆಬ್ರುವರಿ ತಿಂಗಳಿಗೆ ಅಧಿಕ ದಿನವನ್ನಾಗಿ ಮಾರ್ಪಡಿಸಿದರು. ಇದರ ಪ್ರಕಾರ 1600, 2000 ಮತ್ತು ಮುಂದಿನ 2400.... ಹೀಗೆ ನಾಲ್ಕು ನೂರರಿಂದ ಭಾಗಿಸಲ್ಪಡುವ ಇಸ್ವಿಗಳಿಗೆ ಮಾತ್ರ ಅಧಿಕ ವರ್ಷ ಬರುತ್ತದೆ. ಎಲ್ಲರೂ ತಿಳಿದುಕೊಂಡಂತೆ ಬರುವ 2100ನೆಯ ಇಸ್ವಿಯ ಫೆಬ್ರುವರಿ ತಿಂಗಳು ನಾಲ್ಕರಿಂದ ಭಾಗಿಸಲ್ಪಟ್ಟರೂ ಗ್ರೆಗೋರಿಯನ್ ನಿಯಮಕ್ಕೆ ಅನುಸಾರವಾಗಿ 28 ದಿನಗಳಿಗೇ ಸೀಮಿತಗೊಳ್ಳುತ್ತದೆ. ಹೀಗೆ ನ್ಯೂನ್ಯತೆಗಳನ್ನು ಸರಿಪಡಿಸಿ ಕ್ಲೇವಿಯಸ್ ನೀಡಿದ ಸೂತ್ರಕ್ಕೆ ಆಗಿನ ಪೋಪ್ ಗ್ರೆಗೋರಿಯನ್ ಪೋಪರಿಗಿರುವ ವಿಶೇಷ ಪರಮಾಧಿಕಾರ ಪಾಪಲ್ ಬುಲ್‌ದ ಮೂಲಕ 1582ನೆಯ ಇಸ್ವಿ ಫೆಬ್ರುವರಿ 24 ರಂದು ಪರಮಾಯಿಶಿಯನ್ನು ಹೊರಡಿಸಿದರು. ಲ್ಯಾಟಿನ್ ಭಾಷೆಯಲ್ಲಿ ಇದನ್ನು Papal bull Inter gravissimas ಎಂದು ಕರೆಯುತ್ತಾರೆ. ಆ ಮೂಲಕ ಈಸ್ಟರ್ ಹಬ್ಬದ ದಿನವನ್ನು ಮತ್ತೆ ಮೊದಲಿನಂತೆ ಬರುವಂತೆ ಮಾಡಲಾಯಿತು. ಈಗ ಇಲ್ಲೊಂದು ಸಮಸ್ಯೆ ಎದುರಾಯಿತು. ಜ್ಯೂಲಿಯನ್ ಕ್ಯಾಲೆಂಡರಿನಂತೆ ಹತ್ತು ದಿನದ ವ್ಯತ್ಯಾಸವನ್ನು ಹೆಚ್ಚುವರಿ ಮಾಡಬೇಕಿತ್ತು. ಈ ಕಾರಣಕ್ಕೆ ಆ ವರ್ಷದ ಅಂದರೆ 1582ನೆಯ ಇಸ್ವಿ ಅಕ್ಟೋಬರ್ ತಿಂಗಳನ್ನು ಅಲ್ಲಿಯ ತನಕ ಬಳಕೆಯಲ್ಲಿದ್ದ ಜ್ಯೂಲಿಯನ್ ಕ್ಯಾಲೆಂಡರಿನ ವಿದಾಯದ ದಿನವನ್ನಾಗಿ ಘೋಷಿಸಲಾಯಿತು. ಆ ವರ್ಷದ ಅಕ್ಟೋಬರ್ ತಿಂಗಳ 4ನೆಯ ತಾರೀಖಿನ ಮಾರನೆಯ ದಿನ ಅಕ್ಟೋಬರ್ 5 ಬರಲಿಲ್ಲ ಬದಲಿಗೆ ಹತ್ತು ದಿನಗಳನ್ನು ಸೇರಿಸಿ ಅಕ್ಟೋಬರ್ 15 ಎಂದು ಘೋಷಿಸಿ ಗ್ರೆಗೋರಿಯನ್ ಪಂಚಾಂಗ ಅಧಿಕೃತವಾಗಿ ಜಾರಿಗೆ ಬಂತು. ಆ ದಿನ 4ನೆಯ ತಾರೀಖಿಗೆ ಮಲಗಿದವರು ಎದ್ದಿದ್ದು ಅಕ್ಟೋಬರ್ 15 ಬೆಳಿಗ್ಗೆಯೇ! ಹೀಗೆ ಇತಿಹಾಸದಲ್ಲಿ ಹತ್ತು ದಿನ ಕಳೆದೇ ಹೋದ ದಿನವಾಗಿ 1582 ಅಕ್ಟೋಬರ್ ತಿಂಗಳು ದಾಖಲಾಗುತ್ತದೆ.

ಪೋಪರ ವಿಶೇಷ ಪರಮಾಧಿಕಾರವನ್ನು ಬಳಸಿ ಈ ಅಧಿಸೂಚನೆ ಹೊರಡಿಸಿದರೂ ಇದನ್ನು ಜನಸಾಮಾನ್ಯರು ತಕ್ಷಣ ಒಪ್ಪಲಿಲ್ಲ. ಇದು ಜಮೀನುದಾರರು, ಬಡಜನರಿಗೆ ಕೊಟ್ಟ ಜಮೀನಿನ ಗೇಣಿಯನ್ನು ಹತ್ತು ದಿನಗಳಷ್ಟು ಏರಿಸಲು ಮಾಡಿದ ಹುನ್ನಾರವೆಂದು ಬಗೆದರು. ಆದರೆ ಫ್ರಾನ್ಸ್ ಹಾಗೂ

ಇತರ ಕಾಥೊಲಿಕ್ ದೇಶಗಳಾದ ಸ್ಪೇನ್, ಡಚ್, ಜರ್ಮನಿ ಮುಂತಾದವುಗಳು ಗ್ರೆಗೋರಿಯನ್ ಕ್ಯಾಲೆಂಡರನ್ನು ಕೂಡಲೇ ಅನುಷ್ಠಾನಕ್ಕೆ ತಂದವು. ಆದರೆ ಅಮೆರಿಕಾವನ್ನು ಒಳಗೊಂಡ ಬ್ರಿಟಿಷ್ ರಾಜ್ಯಾಡಳಿತ 1752ರವರೆಗೆ ಈ ಕ್ಯಾಲೆಂಡರನ್ನು ಒಪ್ಪಿಕೊಳ್ಳಲಿಲ್ಲ. ರಷ್ಯಾ ಸಹ ಈ ಕ್ಯಾಲೆಂಡರನ್ನು ಬಳಕೆಗೆ ತಂದಿದ್ದು 1918ರಲ್ಲಿ.

ಹಾಗಂತ ಈ ಗ್ರೆಗೋರಿಯನ್ ಪಂಚಾಂಗವೂ ಸಹ ಸೌರಮಾನ ವರ್ಷಕ್ಕಿಂತ 26 ಸೆಕೆಂಡುಗಳಷ್ಟು ಕಿರಿದಾಗಿದೆ. ಸೌರಮಾನವರ್ಷಕ್ಕೆ ಸಮೀಕರಣಗೊಳಿಸಲು ಪ್ರತಿ 3226 ವರ್ಷಗಳಿಗೊಮ್ಮೆ ಒಂದು ಹೊಸ ದಿನವನ್ನು ಸೇರಿಸಬೇಕು. ಈ ದೋಷವನ್ನು ಸರಿಪಡಿಸಲು ಹೊಸ ಹೊಸ ಲೆಕ್ಕಾಚಾರವನ್ನು ಖಗೋಳ ಶಾಸ್ತ್ರಜ್ಞರು ಪ್ರಯತ್ನಿಸುತ್ತಲೇ ಇದ್ದಾರೆ. ಇಂಗ್ಲಿಷ್ ಗಣಿತಜ್ಞ ಜಾನ್ ಹರ್ಶೆಲ್ ಎನ್ನುವವ ಕೆಲ ಸೂಚನೆಯನ್ನು ತಂದಿದ್ದರೂ ಅದನ್ನು ಯಾರೂ ಒಪ್ಪಿಲ್ಲ. ಇನ್ನೊಂದು ಪ್ರಯತ್ನವಾಗಿ 1972ರಿಂದ ಇದು ತನಕ ಕಾಲದ ಲೆಕ್ಕಾಚಾರಕ್ಕೆ ಒಟ್ಟೂ 26 ಅಧಿಕ ಸೆಕೆಂಡುಗಳನ್ನು ಬೇರೆ ಬೇರೆ ಅವಧಿಯಲ್ಲಿ ಸೇರಿಸಲಾಗಿದೆ. ಈ ನಿಟ್ಟಿನಲ್ಲಿ ಕೊನೆಯದಾಗಿ 2015ರ ಜೂನ್ ತಿಂಗಳ 30 ರಂದು ಒಂದು ಸೆಕೆಂಡನ್ನು ಸೇರಿಸಲಾಯಿತು. ಮುಂದಿನ ಲೀಪ್ ಸೆಕೆಂಡನ್ನು ಸೇರಿಸುವ ದಿನವನ್ನು ಇನ್ನೂ ನಿಗದಿಪಡಿಸಿಲ್ಲ. ಆ ದಿನಕ್ಕಾಗಿ ಕಾಯೋಣ.

ನೆನಪಿಡಿ, ಇಡೀ ಜಗತ್ತು ಸೌರಪಂಚಾಂಗಕ್ಕೆ ಸರಿ ಹೊಂದಿಸುವ ಹೊತ್ತಿಗೆ ಕ್ರಿ.ಶ. 16ನೆಯ ಶತಮಾನ ಬೇಕಾದರೆ ಭಾರತೀಯರ ಪಂಚಾಂಗ 5000 ಸಾವಿರ ವರ್ಷಗಳ ಹಿಂದಿನಿಂದಲೇ ಈ ಕುರಿತಾದ ಸ್ಪಷ್ಟ ಕಲ್ಪನೆಯನ್ನು ಹೊಂದಿತ್ತು ಮತ್ತು ಗ್ರಹಣಗಳ ಸಮಯವನ್ನು ವೇದಕಾಲದಿಂದಲೇ ನಿಖರವಾಗಿ ಹೇಳುವಷ್ಟರ ಮಟ್ಟಿಗೆ ನಮ್ಮ ಋಷಿಗಳು ಜ್ಞಾನ ಸಂಪಾದಿಸಿದ್ದರು.

**(ಸೌಜನ್ಯ : ನಾರಾಯಣ ಯಾಜಿ, ವಿಜಯ ಕರ್ನಾಟಕ)**

---

# ಬೆಳೆಯುವ ಪೈರು ಮೊಳಕೆಯಲ್ಲೇ !

**ಡಾ. ಕೆ.ಪಿ. ಪುತ್ತೂರಾಯ**



ಫ್ರಾನ್ಸ್ ದೇಶದಲ್ಲಿ ನಡೆದ ಸತ್ಯಕಥೆ. ಒಂದು ಹಳ್ಳಿಯಲ್ಲಿ ಜ್ಯೋತಿಷಿಯಿದ್ದ. ಅವನು ಹೇಳುತ್ತಿದ್ದ ಭವಿಷ್ಯ ಬಹಳಷ್ಟು ನಿಜವಾಗುತ್ತಿತ್ತು. ಆ ಕಾರಣ ಅವನ ಬಳಿ ದೂರದೂರದ ಊರುಗಳಿಂದ ಜನರು ಬರುತ್ತಿದ್ದರು. ಈ ಜ್ಯೋತಿಷಿಗಾದರೋ ಹಣದ ಮೇಲೆ ಅತಿಯಾಸೆ ಆದುದರಿಂದ ಭವಿಷ್ಯ ನುಡಿಯಲು ಹೆಚ್ಚಿನ ಹಣ ತೆಗೆದುಕೊಳ್ಳುತ್ತಿದ್ದ. ಆದರೂ, ಜನರು ಇವನನ್ನು ಹಾಡಿ ಹೊಗಳುತ್ತಿರುವುದನ್ನು ಕಂಡ ಬಾಲಕನೊಬ್ಬ ತಾನೂ ಏಕೆ ತನ್ನ ಭವಿಷ್ಯ ತಿಳಿದುಕೊಳ್ಳಬಾರದು ಎಂದು ಯೋಚಿಸಿದ. ಒಂದು ದಿನ ಜ್ಯೋತಿಷಿಯ ಬಳಿ ಬಂದು, ತನ್ನ ಭವಿಷ್ಯ ನುಡಿಯಬೇಕೆಂದು ಕೇಳಿಕೊಂಡ. ಆದರೆ, 'ನನ್ನ ಬಳಿ ಇರೋದು ಒಂದು ಪೆನ್ನಿ ಮಾತ್ರ. ನಿಮಗೆ ಅಷ್ಟನ್ನೇ ಕೊಡಬಲ್ಲೆ' ಎಂದ. ಒಂದು ಪೆನ್ನಿಯನ್ನಾದರೂ ಏಕೆ ಬಿಡಬೇಕೆಂದು ಯೋಚಿಸಿದ ಆ ಜಿಪುಣ, ಪೆನ್ನಿಯನ್ನು ಪಡೆದು ಬಾಲಕನ ಹಸ್ತರೇಖೆಗಳನ್ನು ನೋಡಲಾರಂಭಿಸಿದ. ನೋಡುತ್ತಿದ್ದಂತೆ ಅವನ ಮುಖ ಅರಳಲಾರಂಭಿಸಿತು. ಕಾರಣ ಅಂತಹ ಅದ್ಭುತ ಭವಿಷ್ಯ ಹೊಂದಿರುವ ಕೈಯನ್ನು ಅವನು ಅಲ್ಲಿಯವರೆಗೆ ನೋಡಿಯೇ ಇರಲಿಲ್ಲ. ಬಾಲಕನ ಕೈಯಲ್ಲಿ ಅತ್ಯಂತ ವೀರ–ಧೀರ ಚಕ್ರವರ್ತಿಯಾಗುವ ಎಲ್ಲ ಲಕ್ಷಣಗಳಿದ್ದವು. ಆದರೂ ಕೇವಲ ಒಂದೇ ಪೆನ್ನಿಗೆ, ಇಂತಹ ದೊಡ್ಡ ಭವಿಷ್ಯವನ್ನು ಹೇಳೋದು ಸರಿಹೋಗದು ಎಂದು ಯೋಚಿಸಿ, ಸುಮ್ಮನೇ ಒಂದು ಲೋಪದೋಷ ಹೇಳುವ ನೆಪದಲ್ಲಿ, 'ಬಾಲಕನೇ ನಿನ್ನ ಹಸ್ತರೇಖೆಗಳೇನೋ ಅದ್ಭುತ. ಎಲ್ಲ ಒಳ್ಳೆಯ ಲಕ್ಷಣಗಳಿವೆ. ಆದರೆ...' 'ಏನು ಆದರೆ?' ಬಾಲಕ ಕೇಳಲಾಗಿ ಜ್ಯೋತಿಷಿ ಹೇಳಿದ, 'ನಿನ್ನ ಕೈಯಲ್ಲಿ ಇನ್ನೊಂದು ರೇಖೆ ಇರುತ್ತಿದ್ದರೆ ನೀನು ಚಕ್ರವರ್ತಿಯೇ ಆಗುತ್ತಿದ್ದೆ'. 'ಯಾವ ರೇಖೆ?' ಎಂದು ಕೇಳಿದಾಗ, ಆತ ಬಾಲಕನ ಕೈ ಮೇಲೆ ಯಾವುದೋ ಒಂದು ಜಾಗ ತೋರಿಸಿ, 'ಇಲ್ಲಿ ಆ ರೇಖೆ ಇರಬೇಕಾಗಿತ್ತು' ಎಂದ. ತಕ್ಷಣವೇ ಆ ಬಾಲಕ, ಜೇಬಿನಿಂದ ಚೂರಿ ತೆಗೆದು ಜ್ಯೋತಿಷಿ ಹೇಳಿದ ಜಾಗದಲ್ಲಿ ಗೆರೆ ಎಳೆದುಕೊಂಡು, ರಕ್ತಸಿಕ್ತವಾದ ಕೈ ತೋರಿಸುತ್ತ, ನಗು–ನಗುತ್ತಾ ಕೇಳಿದ – 'ಈಗ?' ಬಾಲಕನ ಧೀರತನ ಕಂಡು ಬೆರಗಾದ ಜ್ಯೋತಿಷಿಯ ಕಣ್ಣಂಚಿನಲ್ಲೊ ನೀರು ಬಂತು. ತಾನಾಗಿಯೇ ನಿಜ ಬಾಯಿಯಿಂದ ಬಂತು. 'ಮಗು ನನ್ನನ್ನು ಕ್ಷಮಿಸಿ ಬಿಡು. ನಿನ್ನ ಹಸ್ತರೇಖೆ ಅದ್ಭುತ. ವಿಶ್ವವಿಖ್ಯಾತವಾದ ಚಕ್ರವರ್ತಿಯಾಗುವ ಎಲ್ಲ ಲಕ್ಷಣಗಳು ನಿನ್ನ ಕೈಯಲ್ಲಿವೆ' ಎಂದ. ಮುಂದೆ ಆ ಜ್ಯೋತಿಷಿಯ ಮಾತು ನೂರಕ್ಕೆ ನೂರು ಸತ್ಯವಾಯಿತು. ಆ ಬಾಲಕನೇ ಫ್ರಾನ್ಸ್ ದೇಶವನ್ನಾಳಿದ ಚಕ್ರವರ್ತಿ ನೆಪೋಲಿಯನ್ ಬೋನಾಪಾರ್ಟೆ.

# Wealth Creation

M. Krishna Prasad



Every person would like to have regular source of income which can fulfill their needs to lead a comfortable and peaceful life. It is possible to achieve this goal by a prudent investment plan. Generaly werely on the professional source of income, but if you want to be wealthy then you must have to create alternative sources of income.

Let me list out the 3 possible sources of income which we can create,

1) A Professional source from the job business.

2) An Income from stocks, deposits and fixed investments.

3) A Rental income from real estate.

Every individual [after completion of his education] who starts earning through his professional source, thinks of enhancing his financial status in society, he procures a car, costly accessories, a highly priced rental house, and later on an ownership of a House. He procures all these normally with the help of loans from various sources and falls into a debt trap. Once in a debt trap is a continuos struggle to fulfilling the commitments of EMI.

As a prudent financial planner, we need to keep our needs to its bare minimum in the initial years, save money and start investing in stocks [As a caution invest only in index stocks for persons with appetite for risk] or in mutual funds / deposits. They all will grow at a compound rate and in about 5 years start giving substantial supplementary income. In share trading restrict yourselves to long term investing and avoid day trading.

To start investing in stocks we need to open a demat account. Banks such as SBI, Canara bank, HDFC bank, ICICI bank etc. all of which have provision for opening demat account. Private players like Angel brooking, India Bulls, Motilal Oswal etc. also provide demat services. However I would suggest to open account in HDFC / ICICI which are technologically friendly and also provide information on what to buy and sell.

As we start investing in stocks we have to develop knowledge on how stock markets function, how stock prices move in relation to company performances, what are the current world's economic condition, etc. It is advised to attend 3-4 basic and advanced stock market training courses. Warren Buffet is a world renowned stock investor and one of the richest people in the world. Many books are written on warren Buffet's style Of share market investing, which can give guidance to initial investors.. Historically stocks have earned an average of 8-11% returns per annum, depending on timing.

Once we build a minimum corpus of investment in stocks we can pause a while and invest in a rental in come earning Real Estate. However sufficient caution should be exercised in selecting the location which could get continuous rental income. The real estate could be residential or commercial, Residential may earn 3-5% returns while commercial could earn 6-9% returns. Apart from this capital appreciation and yearly 5% rental appreciation are advantages.

Once bank of stocks / mutual funds / deposits / real estate is created the individual will start having multiple sources of income and will start feeling comfortable financially. At this stage of his life it will be easy for him to procure a luxury car expensive house / foreign tour etc. He can start leading the life of a wealthy person. So it he underlying message is to build multiple sources of regular income and then start spending.

Note: All returns mentioned above are subjective. Every individual is advised to make sufficient study directly, or through experts, before making an investment decision.

# ಭಕ್ತಿಪೂರ್ವಕ ನಮನ




ವಿದ್ಯಾ ವಾಚಸ್ಪತಿ ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯರು ದಿನಾಂಕ 13.12.2020 ರಂದು ದೈವಾಧೀನರಾಗಿರುವುದು ಬಳಗಕ್ಕೆ ಅತ್ಯಂತ ದುಃಖದ ವಿಚಾರ. ತಮ್ಮ ಅಖಂಡ ವಿದ್ವತ್ತು, ಆಳವಾದ ಜ್ಞಾನದಿಂದಾಗಿ ಹಾಗೂ ನೇರ ನಡೆ-ನುಡಿಗಳಿಂದ ಲೋಕಮಾನ್ಯರಾಗಿದ್ದ ಶ್ರೀ ಬನ್ನಂಜೆಯವರು ಕನ್ನಡ ಸಾಹಿತ್ಯ, ಸಂಸ್ಕೃತ ಸಾಹಿತ್ಯ, ಆಧ್ಯಾತ್ಮ ಜ್ಞಾನ, ಜ್ಯೋತಿರ್ವಿಜ್ಞಾನ, ತಂತ್ರಶಾಸ್ತ್ರ, ಮಂತ್ರಶಾಸ್ತ್ರ, ವ್ಯಾಕರಣ, ಮನಃಶಾಸ್ತ್ರ ಹೀಗೆ ವೈವಿಧ್ಯಮಯ ಕ್ಷೇತ್ರದಲ್ಲಿ ಅಪಾರ ಪಾಂಡಿತ್ಯ ಮತ್ತು ಪ್ರಭುತ್ವವನ್ನು ಹೊಂದಿದ್ದ ಅಪರೂಪದ ವಿದ್ವಾಂಸರಾಗಿದ್ದರು.

ಲೇಖನ, ಪ್ರವಚನ, ಅಧ್ಯಯನ, ಅಧ್ಯಾಪನ, ಸ್ವಾಧ್ಯಾಯ, ಪತ್ರಿಕಾ ಪ್ರಪಂಚ, ಯಕ್ಷಗಾನ, ಸಿನೆಮಾ ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ಅಪೂರ್ವ ಮತ್ತು ಅದ್ಭುತ ಪಾಂಡಿತ್ಯದ ಆಗರವಾಗಿದ್ದ ಆಚಾರ್ಯರು ಶಾಂಕರ, ರಾಮಾನುಜ, ಮಾಧ್ವ ಮೊದಲಾದ ಅನೇಕ ಪ್ರಕಾರಗಳುಳ್ಳ ವೇದಾಂತ ಸಾಮ್ರಾಜ್ಯದಲ್ಲಿ ಸವ್ಯಸಾಚಿಯಾಗಿದ್ದರು. ಶ್ರೀ ವಿದ್ಯಾಮಾನ್ಯ ಸ್ವಾಮೀಜಿಯವರ ಪ್ರಿಯ ಶಿಷ್ಯರಾದ ಬನ್ನಂಜೆಯವರು ತಮ್ಮ ಪ್ರವಚನಗಳಿಂದ ಸಕಲ ಪಂಡಿತರನ್ನು ಹಾಗೂ ಪಾಮರರನ್ನು ಆಕರ್ಷಿಸುತ್ತಿದ್ದರು. ಐದು ದಶಕಗಳ ಕಾಲ ಸಂಸ್ಕೃತ ಮತ್ತು ಕನ್ನಡದ ಸಮನ್ವಯ ಕೊಂಡಿಯಾಗಿದ್ದ ಶ್ರೀ ಗೋವಿಂದಾಚಾರ್ಯರು ಸಂಸ್ಕೃತವೊಂದರಲ್ಲೇ 30ಕ್ಕೂ ಅಧಿಕ ಕೃತಿ ರಚಿಸಿದ್ದರೆ, ಕನ್ನಡದಲ್ಲಿ 130ಕ್ಕೂ ಹೆಚ್ಚು ಕೃತಿರತ್ನಗಳನ್ನು ಸಮಾಜಕ್ಕೆ ಅರ್ಪಿಸಿದ್ದಾರೆ. ದೇಶ ವಿದೇಶಗಳಲ್ಲಿ ಸಂಚರಿಸಿ, ಭಾರತೀಯ ಸಾಂಸ್ಕೃತಿಕ ರಾಯಭಾರಿಯಾಗಿ ನಮ್ಮ ದೇಶದ ಪರಂಪರೆಗಳ ಶ್ರೇಷ್ಠತೆಯನ್ನು ಎಲ್ಲೆಡೆ ಪಸರಿಸುವಲ್ಲಿ ಮನೋಜ್ಞವಾದ ಕೊಡುಗೆ ನೀಡಿರುವ ಬನ್ನಂಜೆಯವರು ಆನಂದ ಬಳಗದ ಮಹಿಳಾ ವಿಭಾಗದ ಆಯೋಜನೆಯಲ್ಲಿ ಕೆಲವು ವರ್ಷಗಳಲ್ಲಿ ಹೋಟೆಲ್ ಉಡ್‌ಲ್ಯಾಂಡ್ಸ್‌ನಲ್ಲಿ ಉಪನ್ಯಾಸ ಸಪ್ತಾಹವನ್ನು ನಡೆಸಿಕೊಟ್ಟು, ಬಳಗದ ಸದಸ್ಯರಿಗೆ ಆಧ್ಯಾತ್ಮದ ಬೆಳಕನ್ನು ಹರಿಸಿ, ಹರಸಿದ್ದಾರೆ.

ವಿದ್ಯಾವಾಚಸ್ಪತಿಯವರ ನಿರ್ಗಮನದ ನಂತರ ಶ್ರೀಯುತರ ಈ ಎಲ್ಲಾ ಕೃತಿಗಳು ಸಮಾಜಕ್ಕೆ ಜ್ಞಾನದ ಸುಧೆಯನ್ನು ಉಣಿಸಬೇಕಾಗಿದೆ. "ಇರವು ಸಂಪತ್ತಲ್ಲ, ಇರವಿನ ಅರಿವೇ ಸಂಪತ್ತು" ಎಂದು ಸದಾ ಪ್ರತಿಪಾದಿಸುತ್ತಿದ್ದ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಮಹಾ ಚೇತನಕ್ಕೆ ಆನಂದ ಬಳಗವು ಭಕ್ತಿಪೂರ್ವಕ ನಮನ ಸಲ್ಲಿಸುತ್ತಿದೆ.

# ಮಹಿಮಾನ್ವಿತ ಶ್ರೀರಾಮಮಂತ್ರ



ಸಾಯುವುದಕ್ಕೇ ಜನರು ಎಲ್ಲಾದರೂ ಜಾಗವನ್ನು ಹುಡುಕಿ ಹೋಗುತ್ತಾರೆಂದರೆ ಅದು ಕಾಶಿಗೆ ! ಮರಣಿಸುವ ತನಕ ಅಲ್ಲಿಯೇ ಇರುತ್ತೇವೆಂದು ಇಂದಿಗೂ ಸಾವಿರಾರು ಜನರು ವಾರಣಾಸಿಯಲ್ಲೇ ಉಳಿದು ಬಿಟ್ಟಿದ್ದಾರೆ!! ಏಕೆ?

ಮೇಲ್ನೋಟದ ಕಾರಣವೆಂದರೆ ತಮ್ಮ ನಿರ್ಜೀವ ದೇಹವನ್ನು ಗಂಗೆಯಲ್ಲಿ ಬಿಟ್ಟರೆ ಸಿಗುವ ಪುಣ್ಯ. ಆದರೆ ನಿಜವಾದ ಕಾರಣ ಬೇರೆಯದೇ ಇದೆ ! ಅದೇ ಸಾಯುವ ಕ್ಷಣದಲ್ಲಿ ವಿಶ್ವೇಶ್ವರ / ಕಾಶೀನಾಥ ಪ್ರತ್ಯಕ್ಷನಾಗಿ ಕಿವಿ ಬಳಿ ಸಾರಿ, ಮೃತ್ಯು ಮಂಟಪದ ದಾರಿಯಲ್ಲಿರುವ ಜೀವಕ್ಕೆ ಉಪದೇಶ ಮಾಡುತ್ತಾನೆ. ಏನೆಂದು? ಯಾವ ಮಂತ್ರವನ್ನು? ಷಡಕ್ಷರ ಮಂತ್ರವನ್ನು. ಎಂದರೆ 'ಓಂ ನಮಃ ಶಿವಾಯ' ಎಂಬ ಮಂತ್ರವನ್ನೇ? ಅಲ್ಲಲ್ಲ! ಹಾಗಾದರೆ? ರಾಮಮಂತ್ರವನ್ನು!! ಈಶ್ವರ ಸದಾ ಜಪಿಸುವ ಮಂತ್ರವೇ ಈ ರಾಮಮಂತ್ರ! ರಾಮತಾರಕ ಮಂತ್ರವೆಂದರೆ "ರಾಮ ರಾಮ ರಾಮ" ಇದನ್ನೇ ಪರಮೇಶ್ವರ ತನ್ನ ಭಕ್ತರ ಕಿವಿಯಲ್ಲಿ ಉಸುರುವನಂತೆ! ಶ್ರೀ ಶ್ರೀ ಶಂಕರ ಭಗವತ್ಪಾದಾಚಾಯರರು ಹೀಗೆಂದು ಕೊಂಡಾಡುತ್ತಾರೆ :

**ಯದಾ ವರ್ಣ ಯತ್ಕರ್ಣ ಮೂಲೇಂತ ಕಾಲೇ ।**
**ಶಿವೋ ರಾಮ ರಾಮೇತಿ ರಾಮೇತಿ ಕಾಶ್ಯಾಂ ॥**

ಅಂತಹ ಮಹಿಮಾನ್ವಿತ ಮಂತ್ರ ರಾಮಮಂತ್ರ ! ಶ್ರೀಮದ್ರಾಮಾಯಣದ ಕೊನೆಯಲ್ಲಿ ಬ್ರಹ್ಮ ಶ್ರೀರಾಮರಿಗೇ ಆಶ್ವಾಸನೆ ಕೊಡುತ್ತಾನೆ; "ರಾಮಭಕ್ತ ರಾಮಧ್ಯಾನದಲ್ಲಿ ಪ್ರಾಣ ಬಿಟ್ಟರೆ, ಆತನಿಗೆ ತಾನು ಪ್ರತ್ಯೇಕವಾಗಿ ಸೃಷ್ಟಿಸಿರುವ ಸಾಂತಾನಿಕವೆಂಬ ಸ್ವರ್ಗಲೋಕ ಸಿಗುತ್ತದೆ.'' **(ಲೋಕಾನ್ ಸಾಂತಾನೀಕಾನ್ನಾಮಾ ಯಸ್ಯಾಂತೀ ಮೇ ಸಮಾಗತಃ । ಪ್ರಾಣಾಂಸ್ತ್ಯಕ್ಷ್ಯತಿ ಭಕ್ತ್ಯಾವೈ ತತ್ ಸಂತಾನೇ ನಿವತ್ಸ್ಯತಿ॥)**

**ಡಾ. ಪಾವಗಡ ಪ್ರಕಾಶ್‌ರಾವ್**

# ಮತ್ತೆಂದೂ ಕಾಣದಿರು ನೀ 2020!

– ಡಾ. ಕೆ.ಎನ್. ಅಡಿಗ



ತುಂಬಿದ ಕಂಗಳ ವಿದಾಯ ನಿನಗೆ,
ಮತ್ತೆ ಕಾಣದಿರು ಓ 2020!

ದುಡಿವ ಕೈಗಳ ಕನಸಿನ ಕೆಲಸ ಕಸಿದೆ,
ದಿನದುಡುಮೆಯವರ ಹೊಟ್ಟೆಗೆ ಹೊಡೆದೆ,
ಬದುಕನು ಭರಿಸಲಾಗದ ಬವಣೆಯಾಗಿಸಿದೆ,
ನಗುವ ಕಂಗಳಲಿ ಕಂಬನಿಯ ತುಂಬಿದೆ,
ನೀನಾರಿಗಾದೆಯೇ ಓ 2020!

ಹಿರಿಯ ಜೀವಗಳು ಬೆಂದು ಬಸವಳಿದವು,
ಕಾಲು ಮುರಿದ ಕಪ್ಪೆಗಳಂತಾದರು,
ಮಿಡಿವ ಮನದಲಿ ಕಂಬನಿ ಮಡುಗಟ್ಟಿತು,
ನೋಡು ನೋಡುತಲೇ ಅಂತರ್ಧಾನರಾದರು,
ನೀನಾರಿಗಾದೆಯೇ ಓ 2020!

ನೆನ್ನೆ ಮೊನ್ನೆ ಕಂಡ ಗೆಳೆಯರು,
ಮನಬಿಚ್ಚಿ ಬೆರೆತು ನಕ್ಕವರು,
ತಿರುಗಿ ನೋಡುವಷ್ಟರಲಿ ಮರೆಯಾದರು,
ನಿನ್ನ ಕ್ರೂರನೋಟಕೆ ಬಲಿಯಾದರು,
ನೀನಾರಿಗಾದೆಯೇ ಓ 2020!

ಕಂದಮ್ಮಗಳ ಕಲಿವ ಶಾಲೆ ಮುಚ್ಚಿಸಿದೆ,
ಹೊರಗೆ ಕಾಲಿಡುವ ಧೈರ್ಯ ಕಸಿದೆ,
ಗೆಳೆಯರೊಡನೆ ಬೆರೆಯದಂತೆ ಬಂಧಿಯಾಗಿಸಿದೆ,
ಮೃದುಮನಗಳಿಗೆ ಮಾಯದ ಬರೆಯೆಳೆದೆ,
ನೀನಾರಿಗಾದೆಯೇ ಓ 2020!

ವ್ಯಾಪಾರಗಳ ದೀವಾಳಿ ತೆಗೆದೆ,
ವ್ಯಾಪಾರಿಗಳ ಬೆನ್ನಿಗೆ ಚೂರಿ ಇಟ್ಟೆ,
ಹೊಟ್ಟೆಗೆ ಉರಿವ ಕಿಚ್ಚನ್ನಿಟ್ಟೆ,
ಉಳಿದದ್ದು ಕೇವಲ ತಣ್ಣೀರ ಬಟ್ಟೆ,
ನೀನಾರಿಗಾದೆಯೇ ಓ 2020!

ಹುಚ್ಚಾದೆವು, ಪೆಚ್ಚಾದೆವು, ಬೆಚ್ಚಿದೆವು,
ಎಲ್ಲ ಮುಚ್ಚುವ ಮುಂಗೋಟಿಯ ಮರೆಯಲ್ಲಿ,
ನೋವು, ನಿರಾಸೆಗಳ ಅಡಗಿಸಿಕೊಂಡೆವು,
ತಲೆತಗ್ಗಿಸಿ ಅಸಹಾಯಕರಾಗಿ ನಿಂತೆವು,
ನೀನಾರಿಗಾದೆಯೇ ಓ 2020!

ಈಗ ಹೇಳುತಿರುವೆವು ನಿನಗೆ ವಿದಾಯ,
ನೀ ಮರೆಯಾಗುತಿರುವುದು ಅಭಯಪ್ರದಾಯ,
ಶೋಕದ ಕಣ್ಣೀರು ಆವಿಯಾಗುತಿದೆ,
ಆನಂದಭಾಷ್ಪ ಮೂಡುತಿದೆ ನಿನ್ನ ಬೆನ್ನ ಕಂಡು,
ಹೋಗು, ಇನ್ನು ನೀ ಬರಬೇಡ 2020!

ಆದರೆ ನನ್ನ ಸಮಾನ ಯಾರಿಲ್ಲ

ಎಂಬ ಗರ್ವದ ಅಹಂಕಾರದ ಮನಕೆ
ತಲೆ ಬಾಗುವುದಾ ಕಲಿಸಿದೆ
ನನ್ನೊಂದಿಗೆ ನಾ ಬೆರೆಯುವುದಾ
ಕಲಿಸಿದ
ಮಹಾ ಗುರುವಾದೆ ನೀ

ಹೋಗು...ಇನ್ನೂ ಕಾಡದೇ...
ಮತ್ತೊಮ್ಮೆ, ಮಗದೊಮ್ಮೆ
ಬಾರದಿರು...
ಹೊರಡು ನೀ ಬಾರದಾ ಲೋಕಕೆ
ಒನ್ಸ್ ಫಾರ್ ಆಲ್ ಗುಡ್ ಬೈ 2020!

# ಕೂಸು



ಮೆಲ್ಲನೊದ್ದನವನು
ಎನ್ನೆದೆಗೆ
ಎಳೆದನಾ
ಮುಂಗುರುಳ
ಆತನೆಡೆಗೆ !!

ಹೂಮುತ್ತನಿತ್ತನಾ
ಕೆನ್ನೆಗೆ
ಕಚಗುಳಿಯಿತ್ತನಾ
ಗಲ್ಲಕೆ !!

ಜಗದ ಸಂಭ್ರಮ
ಎನ್ನ ಮಡಿಲೊಳು
ಹೂವಾಯಿತು ಮನ
ಸಂತಸದೊಳು !!

ಸಂಚರಿಸಿತು ಮಿಂಚಿನ ಝರಿ ಮೈಯೊಳು
ಹರಿಯಿತು ಒಲವ ಧಾರೆ ಜೀವದೊಳು !!

ಅವನ ಕಣ್ಣೊಳಗಿತ್ತು ಎನ್ನ ಪ್ರಪಂಚ
ಎನ್ನೊಳಗಿತ್ತು ಅವನ ಪ್ರಪಂಚ !!

ಅವನ ನಗುವೇ ಎನ್ನ ಪಾರಿತೋಷಕ
ಮಿಕ್ಕ ಬಿರುದು ಬಾವಳಿಗಳೆನಗೇತಕೆ !!

ಅಮ್ಮನ ಪಟ್ಟವೆನಗಿತ್ತ ಎನ್ನ ಕೂಸವನು
ಅವನಿರೆ ಜೊತೆ ಜಗದ ಪರಿ ಎನಗೇತಕೆ !!

– ಸುಜಾತ ರಮೇಶ್



Email: sdayurbandara@gmail.com Mob.: 8867147567

ಶ್ರೀ ದುರ್ಗಾ ಆಯುರ್ವೇದ ಭಂಡಾರ

SRI DURGA AYURVEDA BANDARA

*Healthy, Tasty, Eco-friendly Natural Food Products.*

ಆಯುರ್ವೇದ ಚಿಕಿತ್ಸಾಲಯ ಮತ್ತು ಔಷಧಿಗಳು

AYURVEDA HEALTH CARE & MEDICINES

ತಜ್ಞ ವೈದ್ಯರ ಸಮಾಲೋಚನೆ ಲಭ್ಯವಿದೆ *Specialist Consultation also Available*

NOW @ RAGHUVANAHALLI

#27, 5th Cross, Manjunathnagar, (Previous "Aunty Xerox" Building)
Raghuvanahalli, Bangalore 560062.

ಎಲ್ಲಾ ರೀತಿಯ ಆಯುರ್ವೇದ ಔಷಧಿಗಳು ಮತ್ತು ಮನೆಯಲ್ಲೇ ತಯಾರಿಸಿದ ಕಾಂಡಿಮೆಂಟಲ್ ಉತ್ಪನ್ನಗಳು ಸಹ ಲಭ್ಯವಿದೆ

All Types Of Ayurvedic Medicines & Herbal Supplements Available Homemade Condimental Products Also Available


## ಓದುಗರು ಗಮನಿಸಿರಬಹುದಲ್ವಾ...?

ಗಮನಿಸಿಲ್ಲ ಎಂದರೂ ಪರವಾಗಿಲ್ಲ. ವಿವರಣೆ ನೀಡುವುದು ನಮ್ಮ ಕರ್ತವ್ಯ. ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಪ್ರಸ್ತಾಪಿಸಿರುವಂತೆ ಭೃಗುವಾಣಿ ತ್ರೈಮಾಸಿಕ ಪತ್ರಿಕೆಯು ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್, ಭಾರತ ಸರ್ಕಾರ ಈ ಕಚೇರಿಯಲ್ಲಿ ಕನ್ನಡ ಪತ್ರಿಕೆ ಎಂದು ಕೆಲವು ವರ್ಷಗಳ ಹಿಂದೆ ನೋಂದಾಯಿತವಾಗಿತ್ತು. ಇದರಿಂದಾಗಿ ಪತ್ರಿಕೆಯಲ್ಲಿ ಆಂಗ್ಲ ಭಾಷೆಯ ಲೇಖನ, ಕವನ, ವರದಿ, ಬರಹಗಳನ್ನು ಪ್ರಕಟಿಸಲು ಅಡ್ಡಿಯಾಗುತ್ತಿತ್ತು. ಕಾಲ ಬದಲಾದಂತೆ, ಪತ್ರಿಕೆಯಲ್ಲಿ ಆಂಗ್ಲ ಭಾಷೆಯ ಮಾಹಿತಿ ಇರುವುದೂ ಸೂಕ್ತ. ಇದರಿಂದಾಗಿ ಯುವಜನರು ಪತ್ರಿಕೆಗೆ ಲೇಖನ ನೀಡಲು ಮುಂದೆ ಬರಬಹುದು ಎಂದು ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ, ಕಾರ್ಯಕಾರಿ ಸಮಿತಿಯು ಪತ್ರಿಕೆಯಲ್ಲಿ ಕನ್ನಡದ ಜೊತೆಗೆ ಆಂಗ್ಲ ಮತ್ತು ತುಳು ಭಾಷೆಗಳನ್ನೂ ಸೇರಿಸಲು ನಿರ್ಧರಿಸಿ ಈ ವಿಚಾರದಲ್ಲಿ ಅಗತ್ಯವಿರುವ ಅನುಮತಿಯನ್ನು ಆರ್.ಎನ್.ಐ. ದಿಂದ ಪಡೆದಿರುತ್ತದೆ.

ಆದರೆ ಏಕಭಾಷೆಯ ಪತ್ರಿಕೆಯನ್ನು ಬಹುಭಾಷಾ ಪತ್ರಿಕೆ ಮಾಡಲು, ಹೊಸ ಸರ್ಟಿಫಿಕೇಟನ್ನು ಪಡೆಯಬೇಕಾಗಿದ್ದು, ಪತ್ರಿಕೆಯನ್ನು ಹೊಸದಾಗಿ ಆರಂಭಿಸುವುದು ನಿಯಮಾನುಸಾರ ಅಗತ್ಯವಾಗಿದೆ. ಆದುದರಿಂದ ಪತ್ರಿಕೆಯ ಮುಖಪುಟದಲ್ಲಿ ಸಂಪುಟ 1, ಸಂಚಿಕೆ 1 ಎಂದು ನಮೂದಿಸಿರುವುದನ್ನು ನೀವು ಗಮನಿಸಿರಬಹುದು. ಕಳೆದ ಸಂಚಿಕೆಯಲ್ಲಿ ಸಂಪುಟ 33, ಸಂಚಿಕೆ 02 ಇದ್ದದ್ದು ಈ ಸಂಚಿಕೆಯಲ್ಲಿ ಮತ್ತೆ ಸಂಪುಟ 1ಕ್ಕೆ ಮರಳಿರುವುದು ಯಾಕೆ ಎಂದು ನೀವು ಯೋಚಿಸಿದರೆ, ಕಾರಣ ಗೊತ್ತಾಯಿತಲ್ವಾ...?

ಸಂಪುಟ ಯಾವುದೇ ಇರಲಿ.... ನಿಮ್ಮ ಸಂಪೂರ್ಣ ಸಹಕಾರ–ಬೆಂಬಲ ನಮಗಿರಲಿ

**– ಸಂಪಾದಕ ಸಮಿತಿ**

# ಶ್ರೀಮತಿ ಸವಿತಾರವರಿಗೆ "Women Influencer of the 21st Century" ಪ್ರಶಸ್ತಿ



ಆನಂದ ಬಳಗದ ಹಿರಿಯ ಸದಸ್ಯರಾಗಿದ್ದ ದಿ. ಎ. ದಾಸ ರಾವ್‌ರವರ ಸುಪುತ್ರಿ, ಶ್ರೀಮತಿ ಸವಿತಾ ಎ.ಡಿ.ಯವರು ಇತ್ತೀಚೆಗೆ "Women Influencer of the 21st Century" ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೆಂಗಳೂರಿನಲ್ಲಿ 2011ರಿಂದ ಕಾರ್ಯ ನಿರ್ವಹಿಸುತ್ತಿರುವ ಕ್ಲಾಸ್ (Klaus) ಐಟಿ ಸೊಲ್ಯೂಷನ್ ಪ್ರೈ. ಲಿಮಿಟೆಡ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ, ಈ ಸಂಸ್ಥೆಯ ಉತ್ತಮ ಪ್ರಗತಿಗೆ ಅನುಮಪ ಕೊಡುಗೆ ನೀಡುತ್ತಿರುವ ಶ್ರೀಮತಿ ಸವಿತಾರವರು ಸಂಸಾರ ಮತ್ತು ಉದ್ಯಮ ಈ ಎರಡರ ನಡುವೆ ಸಮಂಜಸವಾದ ಸಮತೋಲನ ಕಾಪಾಡಿಕೊಂಡು ಬರುತ್ತಿರುವ, ಹಾಗೂ ನಾಯಕತ್ವ ಗುಣವನ್ನು ರೂಢಿಸಿಕೊಂಡಿರುವ ಕ್ರಿಯಾಶೀಲ ಮಹಿಳೆಯೆಂದು ಹೆಸರುವಾಸಿಯಾಗಿದ್ದಾರೆ. ಇತ್ತೀಚಿನ ವಿದ್ಯಾಮಾನದಲ್ಲಿ ಉದ್ಯಮಗಳನ್ನು ಸಾಂಪ್ರದಾಯಿಕ ರೀತಿಯಲ್ಲಿ ನಿರ್ವಹಿಸುವುದು ಬದಲಾಗುತ್ತಿದ್ದು, ಆನ್‌ಲೈನ್, ಡಿಜಿಟಲ್, ವರ್ಚುವಲ್ ಮೊದಲಾದ ಆಧುನಿಕ ವ್ಯವಸ್ಥೆಗಳು ಜಾರಿಯಲ್ಲಿವೆ. ಇದರಿಂದಾಗಿ ಮಹಿಳೆಯರು ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಸುಲಭವಾಗಿದೆ ಎಂದು ತನ್ನ 24 ವರ್ಷಗಳ ದೀರ್ಘವಾದ ಅನುಭವದಿಂದ ಹೇಳುತ್ತಿರುವ ಸವಿತಾ ಈ ಸಂಸ್ಥೆಯನ್ನು ಸೇರುವ ಮೊದಲು ಎರಡು–ಮೂರು ಇತರ ಸಂಸ್ಥೆಗಳಲ್ಲಿ ದುಡಿದ ಅನುಭವವನ್ನು ಹೊಂದಿದ್ದಾರೆ. ಶ್ರೀಮತಿ ಸವಿತಾರವರ ನೇತೃತ್ವದಲ್ಲಿ ಕ್ಲಾಸ್ ಸಂಸ್ಥೆ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯಾಗುತ್ತಿದ್ದು 2019ರಲ್ಲಿ 200 ಆಸನ ವ್ಯವಸ್ಥೆಯ ಡೆವೆಲಪ್‌ಮೆಂಟ್ ಸೆಂಟರನ್ನು ಬೆಂಗಳೂರಿನಲ್ಲಿ ಆರಂಭಿಸಿದೆ. ಫಾರ್ಚೂನ್ 500 ಕಂಪೆನಿಗಳೂ ಸೇರಿದಂತೆ ಅನೇಕ ಪ್ರತಿಷ್ಠಿತ ಕಂಪೆನಿಗಳಿಗೆ ಐ.ಟಿ. ಸೇವೆ ಮತ್ತು ಸೊಲ್ಯೂಷನ್‌ಗಳನ್ನು ನೀಡುತ್ತಿರುವ ಐ.ಎಸ್.ಒ. 9001 : 27001 ಪ್ರಮಾಣೀಕೃತ ಕ್ಲಾಸ್ ಕಂಪೆನಿಯ ಸರ್ವತೋಮುಖ ಉನ್ನತಿಗೆ ಸದಾ ಕಂಕಣಬದ್ಧರಾಗಿರುವ ಶ್ರೀಮತಿ ಸವಿತಾ, ಏನೇ ಸಾಧನೆ ಮಾಡಿದರೂ ಅದರಲ್ಲಿ ನನ್ನದು ವೈಯಕ್ತಿಕ ಹೆಗ್ಗಳಿಕೆ ಏನಿಲ್ಲ, ಅದೆಲ್ಲಾ ಸಮೂಹ ಪ್ರಯತ್ನ. ಪ್ರಗತಿಯ ಕೀರ್ತಿ ಪ್ರತಿಯೊಬ್ಬರಿಗೂ ಸಲ್ಲಲೇಬೇಕು ಎಂದು ವಿನೀತರಾಗಿ ಹೇಳುತ್ತಾರೆ. ಶ್ರೀಮತಿ ಸವಿತಾ ಎ.ಡಿ.ಯವರ ಸಾಧನೆಗೆ ಅಭಿನಂದನೆಗಳು ಹಾಗೂ ಅವರ ಮುಂದಿನ ಕಾರ್ಯಯೋಜನೆಗಳಿಗೆ ಶುಭ ಹಾರೈಕೆಗಳು


---

**ಮನುಷ್ಯ ಐಶ್ವರ್ಯವಂತನಾಗಲು**
**ಹೋಗಿ ಆರೋಗ್ಯ ಕಳೆದುಕೊಳ್ಳುತ್ತಾನೆ**
**ಮತ್ತದೇ ಆರೋಗ್ಯವನ್ನು ಪುನಃ ಪಡೆಯಲು**
**ಐಶ್ವರ್ಯವನ್ನು ಕಳೆದುಕೊಳ್ಳುತ್ತಾನೆ**
**ಹೋರಾಟದಲ್ಲಿ ಕೊನೆಗೆ ಎರಡನ್ನೂ**
**ಕಳೆದುಕೊಳ್ಳುತ್ತಾನೆ ಇಷ್ಟೇ–ಜೀವನ**

---

## "ಆಡುಗರು–ಮಾಡುಗರು"

– ಎ.ಬಿ. ಕುಂಜಾರ್



ಆಡುವಲ್ಲಿರುವುದು ಒಂದು ಚಟ
ಮಾಡುವಲ್ಲಿರುವುದು ಹಠ
ಆಡುವವರದು ಮಾಡುವುದು ಕಡಿಮೆ
ಮಾಡುವವರದು ಆಡದ ಹಿರಿಮೆ
ಆಡುಗರು ಹಚ್ಚುವರು ಕಿಚ್ಚಿನ ಕುಲುಮೆ
ಸಾಧಕರು ನೆಚ್ಚುವರು ಕೆಚ್ಚಿನ ದುಡಿಮೆ

ಆಡುವುದಕೆ ನಾಲಗೆ ಒಂದೇ ಸಾಕು
ಮಾಡುಗರಿಗೆ ತೀರದ ಶ್ರಮವೇ ಬೇಕು
ಆಡುಗರು ತೋರುವುದೇ ತಮ್ಮೊಡಲ ಹೊಲಸು
ಸಾಧಕರು ಬೆಳಗುವರು ಜನಪದಕೆ ಸೊಗಸು
ಆಡುಗರಿಂದ ಕಾರ್ಯ ಹಿನ್ನಡೆ ಸಾಧ್ಯ
ಮಾಡುಗರಿಂದ ಬರಬೇಕು ಮುನ್ನಡೆಯ ಭಾಗ್ಯ


# ಸುದ್ದಿ - ಸಂಗ್ರಹ

✦ಬಳಗದ ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಮತ್ತು ಶ್ರೀಮತಿ ಪೂರ್ಣಿಮಾ ರವರ ಸುಪುತ್ರ



ಡಾ. ಶ್ಯಾಮ ಸುಂದರ ಇವರ ವಿವಾಹವು ಶ್ರೀ ರಾಜಶೇಖರ ಐತಾಳ ಮತ್ತು ಶ್ರೀಮತಿ ಭವಾನಿ ಯವರ ಸುಪುತ್ರಿ ಸೌ. ವರ್ಷಾ ಎಂಬ ವಧುವಿನೊಂದಿಗೆ ದಿ. 20.11.2020 ರಂದು ಬೆಂಗಳೂರಿನ ಶ್ರೀ ಪ್ರಸನ್ನ ಕಲ್ಯಾಣ ಮಂಟಪದಲ್ಲಿ ಸರಳವಾಗಿ ನೆರವೇರಿದೆ. ನೂತನ ವಧು-ವರರಿಗೆ ಅಭಿನಂದನೆ ಮತ್ತು ಶುಭಾಶಯಗಳು.


---




✦ ಬಳಗದ ಮೆಂಬರ್ ಶಿಪ್ ಡೆವೆಲಪ್ ಮೆಂಟ್ ವಿಭಾಗದ ಸಂಚಾಲಕರಾದ ಶ್ರೀ ಎಂ. ಕೃಷ್ಣಪ್ರಸಾದ್ ರವರ ಷಷ್ಠ್ಯಬ್ದಿ ಸಮಾರಂಭವು ದಿ. 17.12.2020 ರಂದು ಪುತ್ತಿಗೆ ಮಠ ಶ್ರೀ ಗೋವರ್ಧನ ಕ್ಷೇತ್ರದಲ್ಲಿ ವಿದ್ಯುಕ್ತವಾಗಿ ನೆರವೇರಿದೆ. ಅರವತ್ತು ಪೂರೈಸಿದ ಶ್ರೀ ಪ್ರಸಾದ್ ಅವರಿಗೆ ಅಭಿನಂದನೆಗಳು. ಶ್ರೀಯುತರ ಪತ್ನಿ ನಿವೇದಿತಾ ಪ್ರಸಾದ್ ಅವರಿಗೂ

---

ಬಳಗದ ಹಿರಿಯ ಸದಸ್ಯರು ಹಾಗೂ ಬಳಗದ ಎಲ್ಲಾ ಚಟುವಟಿಕೆಗಳಿಗೆ ಪೋಷಕರಾಗಿದ್ದ ಶ್ರೀ ರಾಘವೇಂದ್ರ ಆಚಾರ್‌ರವರು ದಿನಾಂಕ 5.11.2020 ರಂದು ನಿಧನರಾಗಿರುತ್ತಾರೆ. ದಿವಂಗತರ ಆತ್ಮಕ್ಕೆ ದೇವರು ಸದ್ಗತಿ ನೀಡಲಿ ಎಂಬ ಪ್ರಾರ್ಥನೆಯೊಂದಿಗೆ ನಮ್ಮ ಶ್ರದ್ಧಾಂಜಲಿ.




# ಭಾವಪೂರ್ಣ ಶ್ರದ್ಧಾಂಜಲಿ



ಹೋಟೆಲ್ ಉದ್ಯಮದ 'ಭೀಷ್ಮ' ಎಂದೇ ಜನಪ್ರಿಯರಾಗಿದ್ದ ಹಿರಿಯ ಉದ್ಯಮಿ ಎನ್.ಆರ್. ನಾರಯಣ ರಾವ್‌ರವರು ದಿನಾಂಕ 11.1.2021 ರಂದು ನಿಧನರಾಗಿದ್ದಾರೆ. ಆನಂದ ಬಳಗದಲ್ಲಿ 2006–2008 ಮತ್ತು 2008–2010ರಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀ ನಾರಾಯಣ ರಾವ್ ಬಳಗದ ಪೋಷಕರಾಗಿದ್ದರು. ಬಳಗದ ಯಾವುದೇ ಕಾರ್ಯಚಟುವಟಿಕೆಗಳಿಗೆ ಉದಾರವಾದ ಮನಸ್ಸಿನಿಂದ ಬೆಂಬಲ ಮತ್ತು ಮಾರ್ಗದರ್ಶನ ನೀಡುತ್ತಿದ್ದ ಶ್ರೀ ರಾವ್‌ರವರು ಹೋಟೆಲ್ ದ್ವಾರಕದ ಮಾಲಿಕರಾಗಿದ್ದರಲ್ಲದೆ, ಅನೇಕರಿಗೆ ಹೋಟೆಲ್ ಉದ್ಯಮವನ್ನು ಪ್ರಾರಂಭಿಸಲು ಪ್ರೇರೇಪಣೆ ನೀಡಿ, ಅವರ ಬದುಕಿಗೆ ದಾರಿ ತೋರಿಸಿದ ಮಹಾ ಚೇತನ. ದಕ್ಷಿಣ ಕನ್ನಡಿಗರ ಸಂಘ, ಕರ್ನಾಟಕ ಪ್ರದೇಶ ಹೋಟೆಲು ಮಾಲಿಕರ ಸಂಘ, ಹೀಗೆ ಹತ್ತು ಹಲವು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ಅವುಗಳನ್ನು ಪೋಷಿಸಿದ ಶ್ರೀ ನಾರಾಯಣ ರಾವ್‌ರವರಿಗೆ ಸರ್ಕಾರವು ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಉದ್ಯಮದ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡು, ಸಾರ್ಥಕ ಬದುಕು ಸಾಗಿಸಿದ ಸಹೃದಯಿ ಶ್ರೀ ರಾಯರು ತನ್ನ 95ನೇ ವಯಸ್ಸಿನಲ್ಲಿ ನಮ್ಮನ್ನಗಲಿದ್ದು ದಿವಂಗತರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲಿ ಎಂದು ಬಳಗದ ಪ್ರಾರ್ಥನೆ.


---



ಕರ್ನಾಟಕ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀ ಅನಂತ ಕೃಷ್ಣರವರು ದಿನಾಂಕ 11.10.2020 ರಂದು ಮಂಗಳೂರಿನಲ್ಲಿ ನಿಧನರಾಗಿದ್ದಾರೆ. ಕರ್ನಾಟಕ ಬ್ಯಾಂಕ್‌ನ 9ನೇ ಅಧ್ಯಕ್ಷರಾಗಿದ್ದ ಶ್ರೀಯುತರು ಸುಮಾರು 45 ವರ್ಷಗಳ ದೀರ್ಘ ಕಾಲ ಈ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ. ಆನಂದ ಬಳಗದ ಹಿತೈಷಿಗಳಾಗಿದ್ದ ಶ್ರೀ ಅನಂತ ಕೃಷ್ಣರವರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲಿ ಎಂದು ನಮ್ಮ ಪ್ರಾರ್ಥನೆ.


For sure relief from CONSTIPATION
Non Habit forming
Anuloma®
DS Tablets / Churna
Anuloma DS
Anuloma
In Arthritis & Musculoskeletal pain
...For safe and comprehensive management of pain
Arthnex®
Oil / Emulgel
Improved
Arthnex
Available at all Ayurvedic Medical Stores
BPRL
Manufactured by
Bangalore Pharmaceutical & Research Laboratory (P) Ltd.
No.163, Reservoir Street, Basavanagudi, Bengaluru - 560 004. INDIA
Consumer Care No. : 080-41208661 | Website: www.bprl.in

Bhrugu Vani Kannada Tulu English Quarterly KARMUL00447 Bengaluru, January 2021 No. of Pages : 36 (32+4)




If undelivered please return to:
Ananda Balaga
Hotel Ajantha Complex, 22A, M.G. Road
Bengaluru - 560 001
Phone : 2559 4457

Bhrugu Vani - Printed & Published by P.S. Bagilthaya, on behalf of Ananda Balaga, Printed at Omkar Offset Printers, 3/3, 1st Main Road, New Tharagupet, Bengaluru - 560 002. Published at Ananda Balaga. Hotel Ajantha Complex, 22A, M.G.Road, Bengaluru - 560001. Editor : Sri M.Sathyanarayana Bhat